ವಿಜಯಪುರ | ಸಂಪುಟ 02 | ಸಂಚಿಕೆ 63 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ಏಪ್ರಿಲ್ 27, 2024

“ವಿಜಯಪುರದ ಸಂಸದರು ಒಂದು ಬಾರಿಯೂ ರಾಜ್ಯದ ಹಿತಾಸಕ್ತಿ ಪರವಾಗಿ ಮಾತನಾಡಲಿಲ್ಲ. ರಾಜ್ಯದ ಹಿತಾಸಕ್ತಿ ಕಾಪಾಡದೇ ಇರುವವರು ಲೋಕಸಭೆಗೆ ಹೋದರೆ ಏನು ಪ್ರಯೋಜನ? ಧ್ವನಿ ಎತ್ತುವವರು ಲೋಕಸಭೆಗೆ ಹೋಗಬೇಕು.”



ಉದಯರಶ್ಮಿ ದಿನಪತ್ರಿಕೆ

– ಸಿದ್ದರಾಮಯ್ಯ
ಮುಖ್ಯಮಂತ್ರಿಗಳು

**ದೇಶದಲ್ಲಿ ಅವೈಜ್ಞಾನಿಕ ಜಿಎಸ್‌ಟಿ ಜಾರಿ । ಕೇಂದ್ರ ಸರ್ಕಾರದಿಂದ ಬಡವರಿಗೆ ಏನೂ ದೊರಕಿಲ್ಲ । ರಾಹುಲ್ ಗಾಂಧಿ ವಾಗ್ದಾಳಿ**

# ಪ್ರಧಾನಿ ಮೋದಿಯಿಂದ ಕರ್ನಾಟಕಕ್ಕೆ ಅನ್ಯಾಯ :ರಾಹುಲ್

ವಿಜಯಪುರ: ಜಿಎಸ್‌ಟಿ ಮರುಪಾವತಿ ವಿಷಯವಾಗಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಅಸಮಾಧಾನ ಹೊರಹಾಕಿದ ಎಐಸಿಸಿ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರು ಇಂಡಿಯಾ ಒಕ್ಕೂಟದ ಅಧಿಕಾರಕ್ಕೆ ಬಂದರೆ ಈ ಅನ್ಯಾಯ ಸರಿಪಡಿಸುವುದಾಗಿ ಅಭಯ ನೀಡಿದರು.

ನಗರದ ಸೊಲ್ಲಾಪೂರ ರಸ್ತೆಯಲ್ಲಿರುವ ಎಎಸ್‌ಪಿ ವಾಣಿಜ್ಯ ಮಹಾವಿದ್ಯಾಲಯದ ಮೈದಾನದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ ಅವೈಜ್ಞಾನಿಕ ಜಿಎಸ್‌ಟಿ ಜಾ-ರಿಗೊಳಿಸಲಾಗಿದೆ, ಕರ್ನಾಟಕ ಸರ್ಕಾರ ಜಿಎಸ್‌ಟಿ ರೂಪದಲ್ಲಿ 100 ರೂ. ಕೊಟ್ಟರೆ ನಿಮಗೆ 13 ರೂ. ಮಾತ್ರ ಕೇಂದ್ರ ಸರ್ಕಾರ ವಾಪಸ್ಸು ನೀಡುತ್ತಿದೆ, ಆ ಮೂಲಕ ಪ್ರಧಾನಿ ನರೇಂದ್ರ ಮೋದಿ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದ್ದಾರೆ, ಈ ಅನ್ಯಾಯವನ್ನು ಸರಿಪಡಿಸಲು ನಾವು ಬದ್ಧ ಎಂದು ರಾಹುಲ್ ಗಾಂಧಿ ಘೋಷಿಸಿದರು.

ಭಾರತ ಇತಿಹಾಸದಲ್ಲಿ ಈಗ ನಡೆಯುತ್ತಿರುವ ಚುನಾವಣೆ ಸಾಮಾನ್ಯವಾದ ಚುನಾವಣೆಯಲ್ಲ, ಒಂದು ಪಕ್ಷ, ಒಂದು ವ್ಯಕ್ತಿ ಹಿಂದೂಸ್ತಾನದ ಸಂವಿಧಾನವನ್ನು, ಪ್ರಜಾಪ್ರಭುತ್ವವನ್ನು ನಿರ್ನಾಮಗೊಳಿಸುವ ಪ್ರಯತ್ನದಲ್ಲಿ ತೊಡಗಿದೆ, ಸಂವಿಧಾನದಿಂದ ಭಾರತೀಯ ನಾಗರಿಕರಿಗೆ, ಧ್ವನಿ, ಅಧಿಕಾರ, ಮೀಸಲಾತಿ ದೊರಕಿದೆ, ಸಂವಿಧಾನ ಪೂವದಲ್ಲಿ ರಾಜ-ಮಹಾರಾಜರ ಆಳ್ವಿಕೆ ಇತ್ತು, ಆದ-ರೆ ಬಡವರ, ದಲಿತ, ಆದಿವಾಸಿಗಳ ಬಳಿ ಅಧಿಕಾರ, ಹಕ್ಕು ಹಾಗೂ ಧ್ವನಿ ಇದ್ದರೆ ಅದಕ್ಕೆ ಸಂವಿಧಾನವೇ ಕಾರಣ. ಸಂವಿಧಾನದ ರಕ್ಷಣೆಯೇ ನಮ್ಮ ಆದ್ಯತೆ ಎಂದರು.

ಒಂದೆಡೆ ನರೇಂದ್ರ ಮೋದಿ ಅವರು ಸಂವಿಧಾನವನ್ನು ನಿರ್ನಾಮಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ, ಅವರ ಪಕ್ಷದ ಸಂಸದರೇ ಸಂವಿಧಾನವನ್ನು ಬದಲಿಸುವ ಹೇಳಿಕೆಗಳನ್ನು ಹಲವಾರು ಬಾರಿ ಹೇಳಿದ್ದಾರೆ, ಇನ್ನೊಂದೆಡೆ ಇಂಡಿಂ-ಯಾ ಒಕ್ಕೂಟದ ಪಕ್ಷಗಳು ಭಾರತೀಯ ಸಂವಿಧಾನ ಹಾಗೂ ಅಣ್ಣ ಬಸವಣ್ಣನ ಆಶಯ ಹಾಗೂ ವಿಚಾರಧಾರೆಯನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಮೋದಿಜಿ ಅವರು ಕಳೆದ 10 ವರ್ಷಗಳಲ್ಲಿ 25 ಜನರನ್ನು ಅರಬ್ ಪತಿಗಳನ್ನಾಗಿ ಮಾಡಿದ್ದಾರೆ, ಭಾರತದ ಸಂಪತ್ತು, ಭಾರತದ ಎಲ್ಲ ಲಾಭವನ್ನು ಅದಾನಿದಂತಹ ಜನರಿಗೆ ನೀಡಿದ್ದಾರೆ, ಭಾರತ ಸೌರಶಕ್ತಿ, ಪವನಶಕ್ತಿ, ವಿಮಾನ ನಿಲ್ದಾಣ ಮೊದಲಾದವುಗಳೆಲ್ಲವೂ ಅದಾನಿಯಂತಹ ಉದ್ಯಮಪತಿಗಳ ಹಿಡಿತಕ್ಕೆ ನೀಡಿರುವುದು ದುರ್ದೈವ ಎಂದು ರಾಹುಲ್ ಗಾಂಧೀ ಉಲ್ಲೇಖಿಸಿದರು.

ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರ್ಕಾರದಿಂದ ಬಡವರಿಗೆ ಏನೂ ದೊರಕಿಲ್ಲ, ನಾವು ಪಂಚ ಗ್ಯಾರಂಟಿಗಳನ್ನು ನೀಡಿದ ಫಲವಾಗಿ ಬಡವರಿಗೆ ದೊಡ್ಡ ವರವಾಗಿ ಪರಿಗಣಿತವಾಗಿದೆ ಎಂದರು.

ಗೃಹಲಕ್ಷ್ಮಿ ಜಾರಿಯಾದರೆ ಕರ್ನಾಟಕ ಆರ್ಥಿಕ ದಿವಾಳಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು, ಆದರೆ ಏನೂ ಆಗಲಿಲ್ಲ ಎಂದರು.

ಖಾಸಗಿ ವಲಯದಲ್ಲಿ, ಸಾರ್ವಜನಿಕ ವಲಯದಲ್ಲಿ, ಸರ್ಕಾರಿ ಕಚೇರಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಕೇಂದ್ರ ಸರ್ಕಾರವೇ ಯುವಕ-ರಿಗೆ ಅಪ್ರೆಂಟಿಸ್ ತರಬೇತಿ ನೀಡುವ ದೊಡ್ಡ ಮಹತ್ವಾಕಾಂಕ್ಷೆಯನ್ನು ಇಂಡಿಯಾ ಒಕ್ಕೂಟ ಹೊಂದಿದೆ ಎಂದರು.

ನರೇಗಾ ಮಾದರಿಯಲ್ಲಿ ಡಿಪ್ಲೋಮಾ ಮೊದಲಾದ ವೃತ್ತಿಪರ ಕೋರ್ಸ್ ಪೂರೈಸಿದ ಯುವಕರಿಗೆ ಸರ್ಕಾರದಿಂದ 1 ವರ್ಷದ ಉದ್ಯೋಗದ ಅಪ್ರೆಂಟಿಸ್‌ನ್ನು ಕೇಳುವ ಹಕ್ಕುಗಳನ್ನು ನೀಡುವ ಮೂಲಕ ಅವರಿಗೆ ಬಲ ತುಂಬಲಾಗುವುದು, ಇದರಿಂದ ಕೌಶಲ್ಯ ಹಾಗೂ ತರಬೇತಿ ಪಡೆದ ಕೋಟಿ ಕೋಟಿ ಯುವಕರ ಶಕ್ತಿ ದೊರಕಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಇಲ್ಲಿಯವರೆಗೆ ಒಂದೇ ಒಂದು ರೂ. ರೈತರ ಸಾಲಮನ್ನಾ ಮಾಡಿಲ್ಲ, ಎಂ-ಎಸ್‌ಪಿ ಆಧರಿಸಿದ ದರ ನೀಡಿಲ್ಲ, ಆದರೆ ಇಂಡಿಯಾ ಒಕ್ಕೂಟ ಅಸ್ತಿತ್ವಕ್ಕೆ ಬಂದ ತಕ್ಷಣವೇ ರೈತರ ಸಾಲಮನ್ನಾ ಮಾಡುವ ಜೊತೆಗೆ ರೈತರು ಬೆಳೆದ ಬೆಳೆಗಳಿಗೆ ಎಂಎಸ್‌ಪಿ ಆಧರಿಸಿದ ದರ ನೀಡುವ ಸಂಕಲ್ಪ ಮಾಡಲಾಗಿದೆ ಎಂದರು.

ಮೋದಿ ಅವರಿಗೆ ಕಣ್ಣೀರು ಬರಬಹುದು.

ಮೋದಿಜಿ ಅವರು ಸಂಪೂರ್ಣ ಭಯಭೀತರಾಗಿದ್ದಾರೆ, ಹೀಗಾಗಿ ಕೆಲವೇ ದಿನಗಳಲ್ಲಿ ಮೋದಿಜಿ ಅವರಿಗೆ ವೇದಿಕೆಯಲ್ಲಿಯೇ ಕಣ್ಣೀರು ಸುರಿಸಿದರೂ ಸುರಿಸಬಹುದು, ಪಾಕಿಸ್ತಾನ, ಚೈನಾ ಮಾತು ಆಡಬಹುದು, ಮೊಬೈಲ್ ಫೋನ್ ಲೈಟ್ ಆನ್ ಮಾಡಿ ಇಲ್ಲವೇ ಚಪ್ಪಾಳೆ ಹೊಡೆಯಿರಿ ಎಂದು ಹೇಳುವ ದಿನ ದೂರವಿಲ್ಲ, ನಿಮ್ಮ ಗಮನವನ್ನು ಬೇರೆಡೆ ಸೆಳೆಯುವ ಕೆಲಸವನ್ನು ಮಾಡಬಹುದು ಎಂದು ರಾಹುಲ್ ಗಾಂಧೀ ಮೋದಿ ಅವರ ಕುರಿತು ಲೇವಡಿ ಮಾಡಿದರು.



## ಒಣದ್ರಾಕ್ಷಿಯ ಗೌರವ


ಪ್ರಚಾರ ಸಭೆಗೆ ಆಗಮಿಸಿದ ರಾಹುಲ್ ಗಾಂಧೀ ಹಾಗೂ ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪಸಿಂಗ್ ಸುರ್ಜೇವಾಲಾ ಅವರಿಗೆ ವಿಜಯಪುರ ಜಿಲ್ಲೆಯ ರೈತ ಸಿರಿಯನ್ನು ಪ್ರತಿನಿಧಿಸುವ ಸಂಕೇತವಾಗಿ ಒಣದ್ರಾಕ್ಷಿಯ ಹಾರವನ್ನು ಹಾಕಿ ಸಚಿವದ್ವಯರಾದ ಡಾ.ಎಂ.ಬಿ ಪಾಟೀಲ ಹಾಗೂ ಶಿವಾನಂದ ಪಾಟೀಲ ಅವರು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರ ಪರವಾಗಿ ಹೃದಯಸ್ಪರ್ಶಿಯಾಗಿ ಸನ್ಮಾನಿಸಿದರು.

ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಸುರ್ಜೇವಾಲಾ, ಮುಖ್ಯಮಂತ್ರಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ, ಸಕ್ಕರೆ-ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ ಕುಲಕರ್ಣಿ, ಕೆಪಿಸಿಸಿ ಮೀನುಗಾರಿಕೆ ವಿಭಾಗದ ರಾಜ್ಯಾಧ್ಯಕ್ಷ ಮಂಜುನಾಥ ಸುಣಗಾರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಶಾಸಕರಾದ ಯಶವಂತರಾಯಗೌಡ ಪಾಟೀಲ, ಸಿ.ಎಸ್. ನಾಡಗೌಡ, ಅಶೋಕ ಮನಗೂಳಿ, ವಿಠ್ಠಲ ಕಟಕದೊಂಡ, ವಿಧಾನ ಪರಿಷತ್ ಸದಸ್ಯರಾದ ಸುನೀಲಗೌಡ ಪಾಟೀಲ, ಪ್ರಕಾಶ ರಾಠೋಡ, ಕೆಪಿಸಿಸಿ ಪ್ರಚಾರ ಸಮಿತಿ ಮುಖ್ಯ ವಕ್ತಾರ ಸಂಗಮೇಶ ಬಬಲೇಶ್ವರ, ಮುಖಂಡರಾದ ಅಬ್ದುಲ್ ಹಮೀದ್ ಮುಶ್ರೀಫ್, ಮಾಜಿ ಶಾಸಕರಾದ ಡಾ.ಮಕ್ಬೂಲ್ ಬಾಗವಾನ, ಶರಣಪ್ಪ ಸುಣಗಾರ, ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ, ಉಪಮೇಯರ್ ದಿನೇಶ ಹಳ್ಳಿ, ವಿದ್ಯಾರಾಣಿ ತುಂಗಳ, ಶ್ರೀಕಾಂತ ಛಾಯಾಗೋಳ ಮೊದಲಾದವರು ಉಪಸ್ಥಿತರಿದ್ದರು.

### ರಾಜ ನುಡಿ

ನಾನು ದಿನವಿಡೀ ಎಚ್ಚರವಿರುವಾಗ ನನ್ನನ್ನು ನನ್ನ ಬುದ್ಧಿ ಮುನ್ನಡೆಸುತ್ತದೆ. ನಾನು ಮೈ ಮರೆತು ರಾತ್ರಿ ನಿದ್ರೆ ಮಾಡುವಾಗ ಯಾರು ನನ್ನನ್ನು ಬೆಳಗಿನವರೆಗೆ ಮುನ್ನಡೆಸುತ್ತಾರೆ! ನಾನು ನನ್ನಿಂದ ಎನ್ನುವುದ ಬಿಡು ಮರುಳೇ.

-ಡಾ. ರಾಜಶೇಖರ ನಾಗೂರ



### ವಚನ ಚಿಂತನ 367

*ಬಯಲೊಳಗಣ ರೂಪು, ರೂಪಿನೊಳಗಣ ಬಯಲು*
*ಉಭಯವ ವಿಚಾರಿಸಿ ನೋಡುವಲ್ಲಿ*
*ಕುಂಭದೊಳಗೆ ನೀರ ತುಂಬಿ, ಸಿಂದುವಿನೊಳಗೆ ಮುಳುಗಿಸಲಾಗಿ*
*ಅದರೊಳಗೂ ನೀರು, ಹೊರಗೂ ನೀರು.*
*ಹೊರಗಣ ನೀರು ಒಳಗಾಯಿತ್ತು,ಒಳಗಣ ನೀರು ಹೊರಗಾಯಿತ್ತು.*
*ಕುಂಭದೊಳಗಣ ನೀರು ಅಂಗಕ್ಕೊ ಒಳಗೊ ಹೊರಗೊ*

ಎಂಬುದು ತಿಳಿಯದು. ಅಂಗದ ಮೇಲಿಹ ಲಿಂಗ, ಲಿಂಗವ ಧ-ರಿಸಿದ ಅಂಗ ಅರಿವಿನ ಕುರುಹಿಂಗೆ ಒಳಗೊ ಹೊರಗೊ ಎಂಬುದ ವಿಚಾರಿಸಿ ಕರ್ಪೂರದ ಹಾಗೊಲೆಯಲಿ ಮೃತ್ತಿಕೆಯ ಕುಂಭವನಿರಿಸಿ ಕಿಚ್ಚಹಾಕಿ ಓಗರವನಡಲಿಕ್ಕಾಗಿ ಒಲೆ ಉರಿಯದ ಮುನ್ನವೆ ಓಗರ ಬೆಂದು ಕರ್ಪೂರದ ಹಾಗೆ ಒಲೆಯೊಳಗೆ ಉಭಯ ಬಯಲಾಗಿ ಮಡಕೆ ಉಳಿಯಿತ್ತದೇತಕ್ಕೆ? ಘಟ ಉಳಿದು ಆತ್ಮ ಬಯಲಾಯಿತದೇತಕ್ಕೆ? ಉಭಯ ನಿರತವಾದಲ್ಲಿ

ಉರಿಯಿಂದ ಕರ್ಪೂರ ನಷ್ಟವಾದ,ಕರ್ಪೂರದಿಂದ ಉರಿ ನಷ್ಟವಾದಂತೆ ಇಂತೀ ಉಭಯಸ್ಥಲದೊಳಗು ಅಂಗಲಿಂಗ ಪ್ರಾಣಲಿಂಗ ಉಭಯವನೊಂದು ಮಾಡಿ ತಿಳಿದುನಿಜದಲ್ಲಿ ನಿಂದ ಲಿಂಗಾಂಗಿಗೆ ಕೂಗಿನ ಕುಲವಿಲ್ಲಮಹಾಮಹಿಮ ಮಾರೇಶ್ವರಾ.

ಈ ವಚನದಲ್ಲಿ ಕೂಗಿನ ಮಾರಯ್ಯನವರು ಬೆಡಗಿನ ರೂಪದಲ್ಲಿ ಅಂಗ ಮತ್ತು ಲಿಂಗದ ಸಂಬಂಧ ಸೂಕ್ಷ್ಮತೆಯನ್ನು ವಿವ-ರಿಸಿದ್ದಾರೆ. ಇಲ್ಲಿ ಎರಡು ದೃಷ್ಟಾಂತಗಳ ಮೂಲಕ ವಿಷಯಸರಳಿಕರಿಸಲಾಗಿದೆ. ದೈವಚೈತನ್ಯವು ರೂಪ ಮತ್ತು ನಿರೂಪ(ಬಯಲು)ದಲ್ಲಿ ಅಖಂಡಿತವಾಗಿ ಅಸ್ಥಿತ್ವದಲ್ಲಿದ್ದು ಅದರ ಅಸ್ಥಿತ್ವವನ್ನು ಅರಿತು

ಕೊಳ್ಳುವುದೆ ಅನುಭಾವ. ಅದು ಅಂಗದೊಳಗೆ ಮತ್ತು ಹೊರಗೆ ಒಂದೇ ಆಗಿದ್ದು , ಹೇಗೆ ಒಂದು ನೀರು ತುಂಬಿದ ಬಿಂದಿಗೆಯನ್ನು ಸಾಗರದಲ್ಲಿ ಮುಳುಗಿಸಿದಾಗ ಸಾಗರದ ನೀರು ಹಾಗೂ ಬಿಂದಿಗೆ ಯೊಳಗಿನ ನೀರನ್ನು ಭಿನ್ನವಾಗಿ ಕಾಣಲು ಸಾಧ್ಯವಿಲ್ಲವೋ ಹಾಗೆ ಯೇ ಬಿಂದಿಗೆಯಂದದಿ ನಮ್ಮ ಅಂಗದೊಳಗಿನ ಪ್ರಾಣಲಿಂಗವು ಬಯಲೆಂಬ ಸಾಗರದೊಳಗಿನ ಮಹಾಲಿಂಗದ ನೀರಿನಿಂದ ಬಿನ್ನವಾಗಿಸಲು ಸಾಧ್ಯವಿಲ್ಲ.ಕ್ಷಣಮಾತ್ರದಲ್ಲಿ ಕರಗುವ ಕರ್ಪೂರದ ಒಲೆ (ಅಂಗ) ಯ ಮೇಲೆ ಮಂಜುಗಡ್ಡೆಯ ಪಾತ್ರೆ (ಪ್ರಾಣ)ಯ ನ್ನಿಟ್ಟು ಅಡುಗೆ(ಅನುಭಾವ) ಮಾಡಲು ಅಣಿಯಾದಾಗ ಅಂಗ ಅಳಿದು ಪ್ರಾಣ ಉಳಿಯಿತು ಎಂಬ ಅರಿವು ಹೊಂದಿದವನೇ ಲಿಂಗಾಂಗಿ

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಸೋಲಿನ ಹತಾಶೆಯಿಂದ ಮೋದಿ ಭಾವನಾತ್ಮಕ ವಿಚಾರ ಪ್ರಸ್ತಾಪ :ಸಿಎಂ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸುಳ್ಳು ಹೇಳುವಲ್ಲಿ ಮೋದಿಜಿ ಪ್ರವೀಣರು, ಹೆಚ್ಚು ಸುಳ್ಳು ಹೇಳಿದ ಪ್ರಧಾನಿ ಯಾರಾದರೂ ಇದ್ದರೆ ಅದು ಮಿಸ್ಟರ್ ನರೇಂದ್ರ ಮೋದಿ. ಸೋಲಿನ ಹತಾಶೆಯಿಂದ ಭಾವನಾತ್ಮಕ ವಿಚಾರ ಪ್ರಸ್ತಾಪಿಸುತ್ತಿದ್ದಾರೆ, ಹೊಸದಾಗಿ ಮುಸ್ಲಿಂರಿಗೆ ನಾವು ಮೀಸಲಾತಿ ನೀಡುತ್ತಿಲ್ಲ, ಈ ವಿಷಯವಾಗಿ ದಿಕ್ಕು ತಪ್ಪಿಸುವ ಕೆಲಸ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ನಗರದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಹಾವನೂರ ಆಯೋಗ, ಚಿನ್ನಪ್ಪ ರೆಡ್ಡಿ ಆಯೋಗ ಅಲ್ಪಸಂಖ್ಯಾತರಿಗೆ ಮೀಸಲಾತಿ ಕೊಡಲು ಶಿಫಾರಸ್ಸು ಮಾಡಿದೆ, ಹೊಸದಾಗಿ ಯಾವ ರೀತಿಯ ಮೀಸಲಾತಿಯನ್ನು ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ನೀಡಿಲ್ಲ ಎಂದರು.

ಈ ಚುನಾವಣೆಯಲ್ಲಿ ಸೋಲುವುದು ಶತಸಿದ್ಧ ಎಂದು ಬಿಜೆಪಿ ನಾಯಕರಿಗೂ ಗೊತ್ತಾಗಿದೆ, ಸೋಲಿನ ಭೀತಿಯಿಂದಾಗಿ 400 ಸೀಟು ಜಪ ಮಾಡುತ್ತಿದೆ, ಭಾರತೀಯ ಸಂವಿಧಾನ ಬದಲಾವಣೆ ಮಾಡುವಗೋಸ್ಕರವೇ ಈ ಬಿಜೆಪಿ ಈ ಜಪ ಮಾಡುತ್ತಿದೆ, ಭಾರತೀಯ ಸಂವಿಧಾನಕ್ಕೆ ವಿರುದ್ಧವಾಗಿ ಹಾಗೂ ಸಾಮಾಜಿಕ ನ್ಯಾಯದ ವಿರುದ್ಧವಾಗಿ ಇರುವವರು ಬಿಜೆಪಿ. ಅವರು ಯಾವತ್ತೂ ಸಂವಿಧಾನದ ಪರವಾಗಿ ಇಲ್ಲ ಎಂದು ಸಿದ್ಧರಾಮಯ್ಯ ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ಕಾರದ ಸಾಧನೆ ಉಲ್ಲೇಖಿಸಿ ಮತ ಕೇಳುತ್ತಿಲ್ಲ, ಕೇವಲ ಭಾವನಾತ್ಮಕ ವಿಚಾರ ಪ್ರಸ್ತಾಪಿಸಿ, ಭಾವನೆ ಕೆರಳಿಸಿ, ಧರ್ಮ_ಧರ್ಮ ಹಾಗೂ ಜಾತಿಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ, ಹೆಚ್ಚು ಸ್ಥಾನ ಬರುವುದಿಲ್ಲ ಎಂದು ಗೊತ್ತಾಗಿ ನರೇಂದ್ರ ಮೋದಿ ಅವರು ಹತಾಶರಾಗಿ ಸಂಬಂಧಪಡದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಎಂದರು.




ಬೇರೆ ಧರ್ಮದವರ ಮೀಸಲಾತಿ ಕಸಿದುಕೊಂಡು ಮುಸ್ಲಿಂರಿಗೆ ಮೀಸಲಾತಿ ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಹೇಳಿಕೆ ಖಂಡನಾರ್ಹ, ಇದು ಪ್ರಧಾನಿ ಸ್ಥಾನಕ್ಕೆ ಚ್ಯುತಿ ತರುವ ಹೇಳಕೆಯಾಗಿದೆ ಎಂದು ಸಿದ್ಧರಾಮಯ್ಯ ಗರಂ ಆದರು.

ಪ್ರತಿಯೊಬ್ಬರ ಅಕೌಂಟ್‌ಗೆ 15 ಲಕ್ಷ ರೂ. ಹಾಕುವುದಾಗಿ ಹೇಳಿದ್ದ ನರೇಂದ್ರ ಮೋದಿ ಅವರು 15 ಪೈಸೆ ಸಹ ಹಾಕಲಿಲ್ಲ, ರೈತರ ಆದಾಯ ದ್ವಿಗುಣಗೊಳಿಸುವ ವಾಗ್ದಾನ ನೀಡಿದರು, ಆದರೆ ರೈತರ ಖರ್ಚು ಹೆಚ್ಚಾಗಿದೆ ಹೊರತು ಅವರ ಆದಾಯ ಏರಿಕೆಯಾಗಿಲ್ಲ ಇದು ಮೋದಿ ಅವರ ಎರಡನೇಯ ಸುಳ್ಳು, ಅಚ್ಛೆ ದಿನ ಆಯೇಂಗೆ ಎಂದು ಬೆಲೆ ಏರಿಕೆ ಕಡಿವಾಣ ಹಾಕುವ ಭರವಸೆ ನೀಡಿದರು. ಆದರೆ ಯಾವ ಅಗತ್ಯ ವಸ್ತುಗಳ ಬೆಲೆ ಕಡಿಮೆಯಾಗಲಿಲ್ಲ, ಇದು ಮೋದಿ ಅವರು ಹೇಳಿದ ಮೂರನೇಯ ಸುಳ್ಳು, ಡಾ.ಸ್ವಾಮಿನಾಥನ್ ಆಯೋಗದ ವರದಿ ಸಹ ಜಾರಿ ಮಾಡಲಿಲ್ಲ, ಇದು ಮೋದಿ ಅವರ ಮತ್ತೊಂದು ಸುಳ್ಳು ಎಂದರು.

ರೈತರ ಸಾಲಮನ್ನಾ ಮಾಡಿ ಎಂದರೆ ದುಡ್ಡಿಲ್ಲ ಎಂದು ಹೇಳುವ ಬಿಜೆಪಿ, ಕೈಗಾ-ರಿಕೋದ್ಯಮಿಗಳ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿದರು. ಈ ಹಿಂದೆ ನಮ್ಮ ಪಕ್ಷದ ಸದಸ್ಯ ಉಗ್ರಪ್ಪ ಅವರು ಸಾಲಮನ್ನಾ ವಿಷಯವಾಗಿ ಪ್ರಶ್ನೆ ಮಾಡಿದಾಗ ರೈತರ ಸಾಲಮನ್ನಾ ಮಾಡಲು ರಾಜ್ಯ ಸರ್ಕಾರ ಬಳಿ ನೋಟ್ ಪ್ರಿಂಟ್ ಮಾಡುವ ಮಷೀನ್ ಇಲ್ಲ ಎಂದು ಉಡಾಫೆಯ ಮಾತುಗಳನ್ನು ಬಿಜೆಪಿಯ ಯಡಿಯೂರಪ್ಪ ಅವರು ಆಡಿದ್ದರು ಎಂದು ಸಿದ್ಧರಾಮಯ್ಯ ಮತ್ತೊಮ್ಮೆ ಉಲ್ಲೇಖಿಸಿದರು.

ಈ ಭಾಗದಿಂದ ಆಯ್ಕೆಯಾದ ಸಂಸದರು ಒಂದೇ ಒಂದು ಬಾರಿಯೂ ರಾಜ್ಯದ ಹಿತಾಸಕ್ತಿ ಪರವಾಗಿ ಮಾತನಾಡಲಿಲ್ಲ, ಏಕೆಂದರೆ ಅವರಿಗೆ ಮೋದಿ ಅವರನ್ನು ಕಂಡರೆ ನಡುಕವಿದೆ, ರಾಜ್ಯದ ಹಿತಾಸಕ್ತಿ ಕಾಪಾಡದೇ ಇರುವುವರು ಲೋಕಸಭೆಗೆ ಹೋದರೆ ಏನೂ ಪ್ರಯೋಜನ, ಕರ್ನಾಟಕಕೆ ಆಗಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವವರು ಲೋಕಸಭೆಗೆ ಹೋಗಬೇಕು ಎಂದರು.

# ಕಳಪೆ ಟಿಸಿ ಪೂರೈಸಿದ ಗುತ್ತಿಗೆದಾರರ ಮೇಲೆ ಕ್ರಮಕ್ಕೆ ರೈತಸಂಘ ಆಗ್ರಹ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಕಾರ್ಯ ಮತ್ತು ಪಾಲನೆ ಉಪವಿಭಾಗದ ಕಚೇರಿ ಮುಂಭಾಗ ರೈತ ಬಾಂಧವರಿಗೆ ಕಳಪೆ ಗುಣಮಟ್ಟದ ವಿದ್ಯುತ್ ಪರಿವರ್ತಕ(ಟಿಸಿ) ನೀಡಿದ ವಿದ್ಯುತ್ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ರೈತರು ತಂದಿದ್ದ ಕಳಪೆ ವಿದ್ಯುತ್ ಪರಿವರ್ತಕವನ್ನು ಬದಲಾಯಿಸಿ ಹೊಸ ವಿದ್ಯುತ್ ಪರಿವರ್ತಕ ರೈತರಿಗೆ ನೀಡಬೇಕೆಂದು ಆಗ್ರಹಿಸಿ ಶುಕ್ರವಾರ ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ರೈತ ಬಾಂಧವರೊಂದಿಗೆ ಸೇರಿ ಹೆಸ್ಕಾಂ ಎಇಇ ಜಿ.ವ್ಹಿ.ಸಂಪಣ್ಣನವರ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅರವಿಂದ ಕುಲಕರ್ಣಿ ಮಾತನಾಡಿ, ರೈತ ಬಾಂಧವರು ಕೊಳವೆ ಬಾವಿ ಇಲ್ಲವೇ ತೆರೆದ ಬಾವಿಯಿಂದ ಬೆಳೆಗಳಿಗೆ ನೀರುಣಿಸಲು ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ವಿದ್ಯುತ್ ಪರಿವರ್ತಕ ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಳ್ಳುತ್ತಾರೆ. ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಬಳಿ ತೆರಳಿ ಇದಕ್ಕೆ ಸಂಬಂಧಿಸಿದಂತೆ ಅವರು ಹೇಳಿದಷ್ಟು ಹಣ ನೀಡಿ ವಿದ್ಯುತ್ ಸಂಪರ್ಕ ಪಡೆದಕೊಳ್ಳುತ್ತಾರೆ. ಗುತ್ತಿಗೆದಾರರು ರೈತರಿಂದ ಹಣ ವಿದ್ಯುತ್ ಸಂಪರ್ಕಕ್ಕೆ ಬೇಕಾದ ವಿದ್ಯುತ್ ಪರಿವರ್ತಕವನ್ನು ಜೋಡಿ ಕಂಬಗಳ ಮೇಲೆ ಎಂಗಲ್ ಹಾಕಿ ಕೂಡಿಸದೇ ಸಿಮೆಂಟ್ ಬ್ಲಾಕ್ ಹಾಕಿ ಕೂಡಿಸಿದ್ದಾರೆ. ಇದರಿಂದಾಗಿ ಜನ-ಜಾನುವಾರುಗಳಿಗೆ ತುಂಬಾ ಅಪಾಯವಾಗುವ ಸಂಭವ ಸಾಧ್ಯತೆ ಹೆಚ್ಚು. ವಿದ್ಯುತ್ ಪರಿವರ್ತಕವನ್ನು ಕೂಡಿಸುವ ಪದ್ಧತಿಯಲ್ಲಿಯೇ ಗುತ್ತಿಗೆದಾರರು ಕ್ರಮತೆಗೆದುಕೊಳ್ಳಲು ಹೆಸ್ಕಾಂ ಅಧಿಕಾ-ರಿಗಳು ಗಮನ ಹರಿಸಬೇಕಾದ ಅಗತ್ಯವಿದೆ. ಬರಗಾಲದಲ್ಲಿ ವಿದ್ಯುತ್ ಪರಿವರ್ತಕ ಸುಟ್ಟು ಹೋಗುವುದರಿಂದಾಗಿ ರೈತ ಬಾಂಧವರ ಬೆಳೆಗಳು ವಿದ್ಯುತ್ ಇಲ್ಲದೇ ಒಣಗಿ ಹೋಗುತ್ತವೆ. ಹೆಸ್ಕಾಂ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕೆಂದರು.

ತಾಲೂಕಿನ ಮಸಬಿನಾಳ ಗ್ರಾಮದ ಶಿವಾನಂದ ಗುದ್ದಿ ಎಂಬ ರೈತ ಗುತ್ತಿಗೆದಾರರಿಂದ ಕೆಲ ವರ್ಷಗಳ ಹಿಂದೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ಈಗ ವಿದ್ಯುತ್ ಪರಿವರ್ತಕ ಸುಟ್ಟಿದೆ. ಇದನ್ನು ಬದಲಾಯಿಸಿ ಕೊಡಿ ಎಂದು ಹೆಸ್ಕಾಂ ಇಲಾಖೆಗೆ ಬಂದರೆ ಈ ವಿದ್ಯುತ್ ಪರಿವರ್ತಕ ಕಳಪೆಯಾಗಿದೆ. ಇದು ನಮ್ಮ ಕಂಪನಿ ತೆಗೆದುಕೊಳ್ಳಲು ಬರುವುದಿಲ್ಲ. ವಿದ್ಯುತ್ ಪರಿವರ್ತಕ ಬದಲಾವಣೆ ಮಾಡಲು ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ವಿದ್ಯುತ್ ಇಲ್ಲದೇ ಇರುವದರಿಂದಾಗಿ ಬೆಳೆ ಒಣಗಿ ಹೋಗುತ್ತಿವೆ. ಜನ-ಜಾನುವಾರುಗಳಿಗೆ ನೀರು ಇಲ್ಲದಂತಾಗಿದೆ. ಇವರಿಗೆ ವಂಚಿಸಿದ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಉತ್ತಮ ಗುಣಮಟ್ಟದ ವಿದ್ಯುತ್ ಪರಿವರ್ತಕವನ್ನು ಅಧಿಕಾರಿಗಳು ನೀಡಬೇಕೆಂದು ಆಗ್ರಹಿಸಿದ ಅವರು ಇದೇ ರೀತಿಯಲ್ಲಿ ತಾಲೂಕಿನಲ್ಲಿ ವಿದ್ಯುತ್ ಗುತ್ತಿಗೆದಾರರು ಸು.3 ಸಾವಿರ ಕಳಪೆ ವಿದ್ಯುತ್ ಪರಿವರ್ತಕ ಅಳವಡಿಸಿದ್ದಾರೆ ಎಂದು ತಿಳಿದುಬಂದಿದೆ. ಇದರ ಬಗ್ಗೆ ಅಧಕಾರಿಗಳು ತನಿಖೆ ಮಾಡಿ ಸೂಕ್ತ ಕ್ರಮವಹಿಸಬೇಕು. ಈ ವಿದ್ಯುತ್ ಪರಿವರ್ತಕಗಳಿಗೆ ಆ□□□ರ್ ಸಂಖ್ಯೆ ನೀಡಿದ ಹೆಸ್ಕಾಂ ಅಧಿಕಾರಿಗಳ ಮೇಲೆಯೂ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಸೇವೆಯಿಂದ ವಜಾ ಮಾಡಬೇಕು. ರೈತರಿಗೆ ವಂಚಿಸಿದ ಗುತ್ತಿಗೆದಾರರ ಅನುಮತಿ ರದ್ದಾಗಬೇಕು. ಗುತ್ತಿಗೆದಾರರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೇ ಹೋದರೆ ಮುಂದಿನ ದಿನಗಳಲ್ಲಿ ರೈತ ಸಂಘದಿಂದ ಹೆಸ್ಕಾಂ ಇಲಾಖೆಯ ಮುಂಭಾಗ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮನವಿ ಸ್ವೀಕರಿಸಿದ ಎಇಇ ಅವರು ಸೂಕ್ತ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೆಸ್ಕಾಂ ಇಲಾಖೆಯ ಪಿ.ಎಂ. ಉಕ್ಕಲಿ, ರೈತರಾದ ಸುರೇಶ ಬಾಗೇವಾಡಿ, ರಾಜಶೇಖರ ಗುದ್ದಿ, ಶಿವಾನಂದ ಗುದ್ದಿ, ಸಂತಪ್ಪ ಮಣ್ಣೂರ, ಮಲ್ಲಪ್ಪ ಮಟ್ಯಾಳ, ಶಿವಾನಂದ ಹರನಾಳ, ತಿಪ್ಪಣ್ಣ ಪ್ಯಾಟಿ, ನಾಗಪ್ಪ ಬಾಗೇವಾಡಿ, ಚಿದಾನಂದ ಬೈರವಾಡಗಿ, ಬಂಡೆಪ್ಪ ಬೈರವಾಡಗಿ, ಪ್ರಕಾಶ ಬಾಗೇವಾಡಿ, ಶಂಕ್ರು ಗುದ್ದಿ, ಶ್ರೀಶೈಲ ಮಲ್ಲಾಳ, ಉಮೇಶ ಗುದ್ದಿ, ಶಾಂತಪ್ಪ ಹಡಗಲಿ ಇದ್ದರು.



# ಮತದಾನ ಶ್ರದ್ಧೆಯಿಂದ ಪೂರೈಸಿ :ಡಾ.ಪ್ರಭುಸಾರಂಗದೇವ ಶ್ರೀ

**ಉದಯರಶ್ಮಿ ನ್ಯೂಸ್**

ಸಿಂದಗಿ: ಇತ್ತೀಚಿನ ದಿನಮಾನಗಳಲ್ಲಿ ನಗರ ಪ್ರದೇಶದಲ್ಲಿ ಅನೇಕ ಕಾರಣಗಳಿಂದ ಮತದಾನದ ಪ್ರಮಾಣ ಕಡಿಮೆಯಾಗುತ್ತಿರುವುದು ವಿಷಾದನೀಯ ಎಂದು ಸಾರಂಗಮಠದ ಡಾ.ಪ್ರಭು ಸಾರಂಗದೇವ ಶಿವಾ ಚಾರ್ಯರು ಹೇಳಿದರು.

ಪಟ್ಟಣದಲ್ಲಿ 2024ರ ಲೋಕಸಭಾ ಚುನಾವಣೆ ನಿಮಿತ್ಯ ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ, ಜಿಲ್ಲಾ ಸ್ವೀಪ್ ಸಮಿತಿ, ತಾಲೂಕಾ ಆಡಳಿತ, ತಾಲೂಕಾ ಪಂಚಾಯತ, ತಾಲೂಕ ಸ್ವೀಪ್ ಸಮಿತಿ ಹಾಗೂ ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡ ಮತದಾನ ಜಾಗೃತಿ ಅಭಿಯಾನಕ್ಕೆ



ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳಿಂದ ಮತದಾನದ ಜಾಗೃತಿ ಮೂಡಿಸುವ ಕಾರ್ಯ ಅತ್ಯಂತ ಪ್ರಸ್ತುತವಾಗಿದೆ. ಪ್ರತಿಯೊಬ್ಬರು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ನಮ್ಮ ಮತ ನಮ್ಮ ಹಕ್ಕು, ಅದನ್ನು ಶ್ರದ್ಧೆಯಿಂದ ಪೂರೈಸಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಕೈಜೋಡಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಆರೀಫ್ ಬಿರಾದಾರ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪೌರರಾದ ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಯಲ್ಲಿ ನಿರ್ಭಿತಿಯಾಗಿ ಧರ್ಮ, ಜನಾಂಗ, ಜಾತಿ, ಮತ, ಭಾಷೆ ಯಾವುದೇ ದ್ರಾಕ್ಷಿಣ್ಯಗಳಿಂದ ಪ್ರಭಾವಿತರಾಗದೇ ಪ್ರತಿಜ್ಞೆಯನ್ನು ಸ್ವೀಕರಿಸಿ ಮತ ಚಲಾಯಿಸಬೇಕು. ಮತದಾನದ ಪ್ರಮಾಣ ಪ್ರತಿಶತ 100ಕ್ಕೆ100 ರಷ್ಟಾಗಾಬೇಕು. ಆ ನಿಟ್ಟಿನಲ್ಲಿ ಜನಜಾಗೃತಿ ಅವಶ್ಯವಾಗಿದೆ ಎಂದರು.

ಮತದಾನ ಜಾಗೃತಿ ಅಭಿಯಾನವು ಸಾರಂಗಮಠದಿಂದ ಚಾಲನೆಗೊಂಡು ಸ್ವಾಮಿ ವಿವೇಕಾನಂದ ವೃತ್ತದಲ್ಲಿ ಕೊನೆಗೊಂಡಿತು. ಮಾರ್ಗಮಧ್ಯದಲ್ಲಿ ಪ್ರಶಿಕ್ಷಣಾರ್ಥಿಗಳು ಮನೆ ಮನೆಗೆ ತೆರಳಿ ಕರಪತ್ರ ನೀಡಿ ಮತದಾನ ಜಾಗೃತಿ ಮೂಡಿಸಿ. ಕಡ್ಡಾಯವಾಗಿ ಮತ ಚಲಾಯಿಸಿ ಎಂದು ಹೇಳುತ್ತಾ ಮತದಾನದ ಘೋಷಣೆಯನ್ನು ಕೂಗಿದರು.

ಪ್ರಾಚಾರ್ಯ ಜೆ.ಸಿ.ನಂದಿಕೋಲ, ಉಪನ್ಯಾಸಕರಾದ ಸುಧಾಕರ ಚವ್ಹಾಣ, ಪ್ರಶಾಂತ ಕುಲಕರ್ಣಿ, ಆರ್.ಎ.ಹಾಲಕೇರಿ, ಸಿ.ಜಿ.ಕತ್ತಿ, ಮಹಾದೇವಿ ಹಿರೇಮಠ, ವಿದ್ಯಾ ಮೋಗಲಿ ಸೇರಿದಂತೆ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

# ಹಿರೇಮುರಾಳ: ಮದುವೆ ಸಮಾರಂಭದಲ್ಲಿ ಮತದಾನ ಜಾಗೃತಿ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲ್ಲೂಕಿನ ವನಕಿಹಾಳ ಗ್ರಾಮದಲ್ಲಿ ಶುಕ್ರವಾರ ಜರುಗಿದ ಮಹೇಂದ್ರಕರ ಮದುವೆ ಸಮಾರಂಭದಲ್ಲಿ ಗ್ರಾಮ ಪಂಚಾಯತಿ ಹಾಗೂ ತಾಲೂಕು ಸ್ವೀಪ್ ಸಮಿತಿಯಿಂದ ಮತದಾನ ಜಾಗೃತಿ ಮೂಡಿಸಲಾಯಿತು.

ವನಕಿಹಾಳ ಗ್ರಾಮದ ಹಿರೇಮುರಾಳ ಗ್ರಾಮ ಪಂಚಾಯತಿ ಸಿಬ್ಬಂದಿ ಹಣಮಂತ್ರಾಯ ಹಾಗೂ



ರೇಣುಕಾ ಇವರ ಮದುವೆ ಕಾರ್ಯಕ್ರಮದಲ್ಲಿ ತಾಲೂಕು ಸ್ವೀಪ್ ಸಮಿತಿ ಸದಸ್ಯರು ಮತದಾರರ ಜಾಗೃತಿ ಕರಪತ್ರಗಳನ್ನು ನೀಡಿ ವಿಶಿಷ್ಟವಾಗಿ ಚಟುವಟಿಕೆ ಹಮ್ಮಿಕೊಂಡು ಮದುವೆಗೆ ನೆರೆದಿದ್ದ ಜನರಿಗೆ ನವ ವಧು–ವರರಿಗೆ ಮತದಾನದ ಜವಾಬ್ದಾರಿಗಳ ಕುರಿತು ತಿಳಿಸಿದರು.

ಮದುವೆ ಸಮಾರಂಭದಲ್ಲಿ 400ಕ್ಕೂ ಅಧಿಕ ಜನರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಕೆ.ಎಚ್. ಕುಂಬಾರ ಅವರು "ಮತದಾನ ಪ್ರತಿಜ್ಞೆ ವಿಧಿ" ಬೋಧಿಸಿದರು. ತಾಲೂಕು ಪಂಚಾಯತಿ ನರೇಗಾ ಐಇಸಿ ಸಂಯೋಜಕ ಪರಮೇಶ ಹೊಸಮನಿ, ಗ್ರಾಮ ಪಂಚಾಯತಿ ಎಸ್‌ಡಿಎ ಎನ್.ಜಿ.ಬಿರಾದಾರ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಹಾಜರಿದ್ದರು.

# ಕಾಂಗ್ರೆಸ್ ಪದಾಧಿಕಾರಿಗಳಿಗೆ ಪಂಚಮಸಾಲಿ ಸಮಾಜದಿಂದ ಸನ್ಮಾನ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಡೈಮಂಡ್ ಬ್ಯಾಂಕ್ ಸಭಾಂಗಣದಲ್ಲಿ ನೂತನವಾಗಿ ಕಾಂಗ್ರೆಸ್ ಯುವ ಘಟಕದ ತಾಲೂಕಾದ್ಯಕ್ಷರಾಗಿ ಕುಮಾರ ದೇಸಾಯಿ ಹಾಗೂ ಜಿಲ್ಲಾ ಉಪಾದ್ಯಕ್ಷರಾಗಿ ಎಸ್.ಬಿ.ಪಾಟೀಲ ಆಯ್ಕೆಯಾದ ನಿಮಿತ್ಯ ಪಂಚಮಸಾಲಿ ಸಮಾಜದ ವತಿಯಿಂದ ಗೌರವಿಸಿ



ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡ ಸೋಮನಗೌಡ ಬಿರಾದಾರ, ತಾಲೂಕಾಧ್ಯಕ್ಷ ಎಂ.ಎಂ. ಹಂಗರಗಿ, ಪ್ರಧಾನ ಕಾರ್ಯದರ್ಶಿ ಆನಂದ ಶಾಬಾದಿ, ಮಿಸಲಾತಿ ಹೋರಾಟ ಸಮಿತಿ ಅದ್ಯಕ್ಷ ಚಂದ್ರಶೇಖರ ನಾಗರಬೆಟ್ಟ, ಗುರು ಬಸರಕೋಡ, ಶಿವರಾಜ ಪೊಲೀಸಪಾಟೀಲ, ಮಲ್ಲನಗೌಡ ಪಾಟೀಲ ಇಬ್ರಾಹೀಂಪೂರ ಸೇ–ರಿದಂತೆ ಅನೇಕರು ಇದ್ದರು.

# ಸಿಂದಗಿಯಲ್ಲಿ ವಿಶ್ವ ಮಲೇರಿಯಾ ದಿನಾಚರಣೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಅನಾಫೆಲಿಸ್ ಎಂಬ ಹೆಣ್ಣು ಸೊಳ್ಳೆ ಕಚ್ಚುವುದ–ರಿಂದ ಮಲೇರಿಯಾ ಹರಡುತ್ತದೆ ಎಂದು ತಾಲೂಕು ವೈದ್ಯಾಧಿಕಾರಿ ಡಾ.ಎ.ಎ.ಮಾಗಿ ಹೇಳಿದರು.

ಪಟ್ಟಣದ ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ವಿಜಯಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಇಲಾಖೆ ಮತ್ತು ಸಿಂದಗಿ ತಾಲೂಕಾ ಆರೊಗ್ಯ ಇಲಾಖೆ ಸಹಯೋಗದಲ್ಲಿ ರಾಷ್ಟೀಯ ಕೀಟಜನ್ಯ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಂಡ ವಿಶ್ವ ಮಲೇರಿಯಾ ದಿನಾಚರಣೆ ಕಾರ್ಯಕ್ರಮವನ್ನು ತಾಲೂಕು ವೈದ್ಯಾಧಿಕಾರಿ ಡಾ.ಎ.ಎ.ಮಾಗಿ ಉದ್ಘಾಟಿಸಿ ಮಾತನಾಡಿದ ಅವರು, ಹೆಚ್ಚು



ಸಮಾನತೆಯ ಜಗತ್ತಿಗೆ ಮಲೇ–ರಿಯಾ ವಿರುದ್ದದ ಹೋರಾಟವನ್ನು ತೀವ್ರಗೊಳಿಸೋಣ ಎಂಬ ಘೋಷ ವಾಕ್ಯದೊಂದಿಗೆ ಈ ಬಾರಿ ಆಚರಣೆ ಮಾಡಲಾಗುತ್ತಿದೆ. ಈ ರೋಗದ ಮುಖ್ಯ ಲಕ್ಷಣ ಸಾಮಾನ್ಯವಾಗಿ ಈ ರೋಗದಿಂದ ತೀವ್ರ ಪರಿಣಾಮಗಳು ಆಗದಿದ್ದರೂ, ಫಾಲ್ಸಿಪಾರಂ ಎನ್ನುವ ಜಾತಿಯ ರೋಗಾಣುವಿನಿಂದ ಕೆಲವೊಮ್ಮೆ ವಿಶೇಷ ತೊಂದರಗಳು ಉಂಟಾಗಬಹುದು. ರೋಗ ಮೆದುಳುಗೂ ಮತ್ತು ಇತರ ಒಳ ಅಂಗಾಂಗಗಳಿಗೆ ಹರಡಿ ವ್ಯಕ್ತಿ ಸಾವು ಸಂಭವಿಸಬಹುದು ಎಂದರು.

ಈ ವೇಳೆ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ. ಕುಲಕರ್ಣಿ ಮಾತನಾಡಿ, ಈ ರೋಗವನ್ನು ತಡೆಗಟ್ಟಲು ಸರಕಾರ ವ್ಯಾಪಕವಾಗಿ ಎಲ್ಲೆಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆರೋಗ್ಯವೇ ಭಾಗ್ಯ ಎಂಬಂತೆ ಜನರ ಆರೋಗ್ಯ ಕಾಪಾಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮಲೇ–ರಿಯಾ ಬಾರದಂತೆ ನಮ್ಮ ಸುತ್ತಮುತ್ತಲಿನ ವಾತಾವರಣ ಸ್ವಚ್ಛಂದವಾಗಿಟ್ಟುಕೊಳ್ಳುವುದು ನಮ್ಮ ಜವಾಬ್ದಾರಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ವಾಯ್.ಚೌಡಕಿ, ಎಸ್.ಎಸ್. ಹೂಗಾರ, ಭೀಮಾಶಂಕರ ಬಿರಾದಾರ, ರಾಹುಲ್ ಚವ್ಹಾಣ, ಬಸವರಾಜ ಪಾಟೀಲ್, ಡಾ.ಆರ್. ಎಸ್.ಇಂಗಳೆ, ಪ್ರಭು ಜಂಗಿನಮಠ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೀರೇಂದ್ರ ಪವಾಡೆ ಸೇರಿದಂತೆ ಇಲಾಖೆಯ ಅಧಿಕಾರಗಳು ಮತ್ತು ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳು ಇದ್ದರು.

# ಮೋದಿಯವರನ್ನು ಪ್ರಧಾನಿ ಮಾಡಲು ಕೈಜೋಡಿಸಿ :ಪಾಟೀಲ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರ ಮತಕ್ಷೇತ್ರ ವ್ಯಾಪ್ತಿಯ ವಾರ್ಡ ನಂ.21 ರ ವ್ಯಾಪ್ತಿಯ ಇಬ್ರಾಹಿಂಪುರ ನಗರದಲ್ಲಿ ವಿಜಯಪುರ ಲೋಕಸಭಾ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ಅವರ ಪರವಾಗಿ ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ನಿ. ನಿರ್ದೇಶಕರಾದ ರಾಮನಗೌಡ ಪಾಟೀಲ ಯತ್ನಾಳ ಅವರು ಮನೆ ಮನೆಗೆ ತೆರಳಿ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಜಗತ್ತು ಮೆಚ್ಚಿದ ನಾಯಕರಾದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಳೆದ 10 ವರ್ಷದ ಆಡಳಿತದಲ್ಲಿ ನೂರಾರು ಜನಪರ ಯೋಜನೆಗಳನ್ನು ಜಾ–ರಿಗೆ ತಂದಿದ್ದಾರೆ. ಮುಂದೆ ಕೂಡ ದೇಶದ ಸುರಕ್ಷತೆ ಮತ್ತು ಅಭಿವೃದ್ಧಿಗಾಗಿ ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಲು ನಾವೆಲ್ಲರೂ ಕೈಜೋಡಿಸುವ ಅಗತ್ಯವಿದೆ. ಹೀಗಾಗಿ ವಿಜಯಪುರ



ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ರಮೇಶ ಜಿಗಜಿಣಗಿ ಅವರನ್ನು ಗೆಲ್ಲಿಸಲು ಬಿಜೆಪಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಮಹಾನಗರ ಪಾಲಿಕೆ ಸದಸ್ಯ ಮಲ್ಲಿಕಾರ್ಜುನ ಗಡಗಿ, ಬಿಜೆಪಿ ನಗರ ಮಂಡಲ ಅಧ್ಯಕ್ಷರಾದ ಶಂಕರ ಹೂಗಾರ, ಪ್ರಧಾನ ಕಾರ್ಯದರ್ಶಿ ಪಾಪುಸಿಂಗ್ ರಜಪೂತ್, ಎಸ್.ಸಿ ಮೋರ್ಚಾ ಅಧ್ಯಕ್ಷ ಪ್ರಕಾಶ ಚವ್ಹಾಣ, ರೈತ ಮೋರ್ಚಾ ಅಧ್ಯಕ್ಷ ರಾಚು ಬಿರಾದಾರ, ಮುಖಂಡರಾದ ಮಡಿವಾಳ ಯಾಳವಾರ, ಶರಣು ಕಾಖಂಡಕಿ, ವಿರೇಂದ್ರ ಚೌಕಿಮಠ, ಬಾಳುಗೌಡ ಕಲಾದಗಿ, ನಂದಕುಮಾರ್ ಗಡಗಿ, ಪ್ರಕಾಶ ಗಡಗಿ, ಆನಂದ ಪಡಗಾನೂರ, ವಿಜಯಕುಮಾರ ಗಚ್ಚಿನಕಟ್ಟಿ, ಸುನೀಲ ನುಚ್ಚಿ, ನವೀನ ಜುಮನಾಳ ಮತ್ತಿತರರು ಇದ್ದರು.

# ಇಂದಿನಿಂದ ವಡವಡಗಿ ನಂದಿಮಠದ ಜಾತ್ರಾಮಹೋತ್ಸವ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಶರಣಕ್ಷೇತ್ರ ವಡವಡಗಿ ಗ್ರಾಮದ ನಂದಿಮಠದ ಗುರುವೀರಸಿದ್ದ ಶಿವಯೋಗಿಗಳ 74 ನೇ ಜಾತ್ರಾಮಹೋತ್ಸವ ಹಾಗೂ ಲಿಂ.ಮಲ್ಲಿಕಾರ್ಜುನ ಸ್ವಾಮೀಜಿಗಳ ದ್ವಿತೀಯ ಪುಣ್ಯಾರಾಧನೆಯಂಗವಾಗಿ ಏ. 27 ರಿಂದ 30 ರವರೆಗೆ ನಾಲ್ಕು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ನಂದಿಮಠದ ವೀರಸಿದ್ದ ಸ್ವಾಮೀಜಿ ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ಏ.27 ರಂದು ಬೆಳಗ್ಗೆ 8 ಗಂಟೆಗೆ



ಬೃಂಗೀಶ್ವರಲಿಂಗ ಶಿವಾಚಾರ್ಯ ಸ್ವಾಮೀಜಿಯವರಿಂದ ಷಟ್ಥಲ ಧ್ವಜಾರೋಹಣದೊಂದಿಗೆ ಜಾತ್ರಾಮಹೋತ್ಸವ ಕಾರ್ಯಕ್ರಮ ಆರಂಭವಾಗಲಿದೆ. ಬೆಳಗ್ಗೆ 10 ಗಂಟೆಗೆ ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆ, ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಸಂಗಮೇಶ್ವರ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದ ಸದುಪಯೋಗವನ್ನು ಜನರು ಪಡೆದುಕೊಳ್ಳಬೇಕೆಂದರು.

ಏ. 28 ರಂದು ಸಂಜೆ 7 ಗಂಟೆಗೆ ಜಾತ್ರಾಮಹೋತ್ಸವದಂಗವಾಗಿ ಹಮ್ಮಿಕೊಂಡಿದ್ದ ಪುರಾಣ ಮಹಾಮಂಗಲ ಕಾರ್ಯಕ್ರಮ ದೇವರಹಿಪ್ಪರಗಿಯ ಮಡಿವಾಳೇಶ್ವರ ಸ್ವಾಮೀಜಿ, ಸುರಪುರದ ಪ್ರಭುಲಿಂಗ ಸ್ವಾಮೀಜಿ, ಬಸವನಬಾಗೇವಾಡಿಯ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಕುಂಟೋಜಿಯ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ವಿವಿಧ ಶ್ರೀಗಳ ಸಾನಿಧ್ಯದಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಮಹಾದೇವಯ್ಯ ಹಿರೇಮಠ ಅವ–ರಿಂದ ಉಪನ್ಯಾಸ, ಸೇವೆ ಸಲ್ಲಿಸಿದ ಸದ್ಭಕ್ತರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ. ರಾತ್ರಿ 10 ಗಂಟೆಗೆ ವಿಜಯಪುರದ ಗುರು ಪುಟ್ಟರಾಜ ನಾಟ್ಯ ಸಂಘದಿಂದ ಮಿಸ್ಟರ್ ಗುಂಡುರಾವ ಸಾಮಾಜಿಕ ನಾಟಕ ಪ್ರದರ್ಶನವಾಗಲಿದೆ ಎಂದರು.

ಏ. 29 ರಂದು ಬೆಳಗ್ಗೆ 8 ಗಂಟೆಗೆ ವಿದ್ಯಾಸಾಗರ ಹಿರೇಮಠ, ಆನಂದಯ್ಯ ಸ್ಥಾವರಮಠ ಅವರ ವೈದಿಕತ್ವದಲ್ಲಿ ಮೃತ್ಯುಂಜಯ ಹೋಮದ ಪೂರ್ಣಾಹುತಿ ನಡೆಯಲಿದೆ. ಸಂಜೆ 7 ಗಂಟೆಗೆ ಶಿರಹಟ್ಟಿಯ ಜಗದ್ಗುರು ಫಕೀರ ಸಿದ್ದರಾಮ ಸ್ವಾಮೀಜಿ, ಇಂಗಳೇಶ್ವರದ ಚನ್ನಬಸವ ಸ್ವಾಮೀಜಿ, ನಂದಗಾಂವದ ರಾಜಶೇಖರ ಸ್ವಾಮೀಜಿ, ಪಡೇಕನೂರಿನ ಮಲ್ಲಿಕಾರ್ಜುನ ಸ್ವಾಮೀಜಿ, ಕಲಕೇ–ರಿಯ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮೀಜಿ, ಚಡಚಣದ ಷಡಕ್ಷರ ಸ್ವಾಮೀಜಿ, ಹಳೆಕೋಟೆಯ ಸಿದ್ದಬಸವ ಸ್ವಾಮೀಜಿ, ಕೊಣ್ಣೂ–ರಿನ ಡಾ.ವಿಶ್ವಪ್ರಭು ಶಿವಾಚಾರ್ಯ ಸ್ವಾಮೀಜಿ, ಯಡ್ರಾಮಿಯ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯದಲ್ಲಿ ಶಿವಾನುಭವ ಚಿಂತನ ನಡೆಯಲಿದೆ. ಈ ಕಾರ್ಯಕ್ರಮವನ್ನು ಸಚಿವ ಶಿವಾನಂದ ಪಾಟೀಲ, ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸುವರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಮಹನೀಯರಿಗೆ ನಂದಿ ಸಿರಿ ರಾಜ್ಯ ಪುರಸ್ಕಾರ ನೀಡಿ ಗೌರವಿಸಲಾಗುವದು. ರಾತ್ರಿ 10.30 ಗಂಟೆಗೆ ಸಿದ್ದು ನಾಲತವಾಡ ಅವ–ರಿಂದ ಹಾಸ್ಯ ಹಬ್ಬ ಜರುಗಲಿದೆ ಎಂದರು.

ಏ.30 ರಂದು ಬೆಳಗ್ಗೆ 6 ಗಂಟೆಗೆ ಕರ್ತೃ ಗದ್ದುಗೆಗೆ ಪೂಜೆ, ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಜಂಗಮ ವಟುಗಳಿಗೆ ಅಯ್ಯಾಚಾರ ಸಂಸ್ಕಾರ ಡಾ.ವಿಶ್ವಪ್ರಭುದೇವ ಶಿವಾಚಾರ್ಯ ಸ್ವಾಮೀಜಿಯವರ ಸಾನಿಧ್ಯದಲ್ಲಿ ಜರುಗಲಿದೆ. ನಂತರ 9 ಗಂಟೆಗೆ ವಿವಿಧ ಕಲಾ ತಂಡದ ಮೇಳ, ವಿವಿಧ ವಾದ್ಯ ಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವೀರಸಿದ್ದ ಶಿವಯೋಗಿಗಳವರ ಪಲ್ಲಕ್ಕಿ ಉತ್ಸವ ಹಾಗೂ ಶಿರಹಟ್ಟಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ಜರುಗಲಿದೆ. ಮಧ್ಯಾನ್ಹ 1 ಗಂಟೆಗೆ ಶ್ರೀಮಠದ ಶ್ರೀಗಳಿಂದ, ಪುರವಂತ–ರಿಂದ ಅಗ್ನಿಶಮನ ಜರುಗಿದ ನಂತರ ಮಹಾಪ್ರಸಾದ ವಿತರಣೆ ನಡೆಯಲಿದೆ. ಸಂಜೆ 4 ಗಂಟೆಗೆ ಉತ್ಸವ ಮೂರ್ತಿ ಹಾಗೂ ಕೊಡೆ ಕಳಸ ಬರಮಾಡಿಕೊಂಡ ನಂತರ 5 ಗಂಟೆಗೆ ರಥೋತ್ಸವ ಜರುಗಲಿದೆ. ರಾತ್ರಿ ಆಕರ್ಷಕ ಮದ್ದು ಸುಡುವ ಕಾರ್ಯಕ್ರಮ ಜರುಗಿದ ನಂತರ ರಾತ್ರಿ 10 ಗಂಟೆಗೆ ಬಸವನಬಾಗೇವಾಡಿಯ ಬಸವೇಶ್ವರ ಬಯಲಾಟ ಸಂಘದಿಂದ ರೇಣುಕಾ ಯಲ್ಲಮ್ಮ ಬಯಲಾಟ ಪ್ರದರ್ಶನವಾಗಲಿದೆ. ನಾಲ್ಕು ದಿನಗಳ ನಡೆಯಲಿರುವ ವಿವಿಧ ಕಾರ್ಯಕ್ರಮಗಳಿಗೆ ಸದ್ಭಕ್ತರು ಆಗಮಿಸಿ ಗುರುಕೃಪೆಗೆ ಪಾತ್ರರಾಗಬೇಕೆಂದರು.

# ವಿದ್ಯುನ್ಮಾನ ಮತಯಂತ್ರಗಳ ಪೂರ್ವಸಿದ್ದತೆ



**ಉದಯರಶ್ಮಿ ನ್ಯೂಸ್**

ವಿಜಯಪುರ: ಲೋಕಸಭಾ ಚುನಾವಣೆಯನ್ನು ಜಿಲ್ಲೆಯಲ್ಲಿ ಪಾರದರ್ಶಕವಾಗಿ ಹಾಗೂ ಶಾಂತಿಯುತವಾಗಿ ಜರುಗಿಸಲು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಅವರು ಶುಕ್ರವಾರ ಬಸವನ ಬಾಗೇವಾಡಿ, ಮುದ್ದೇಬಿಹಾಳ ಮತ್ತು ದೇವರಹಿಪ್ಪರಗಿ ಮತಕ್ಷೇತ್ರದ ಇವಿಎಂ ಭದ್ರತಾ ಕೊಠಡಿಗಳಿಗೆ ಭೇಟಿ ನೀಡಿ, ವಿದ್ಯುನ್ಮಾನ ಮತಯಂತ್ರಗಳ ಪೂರ್ವಸಿದ್ದತೆ ಕುರಿತು ಪರಿಶೀಲನೆ ಮಾಡಿದರು.

# ಋತ್ವೀಕ ಬ್ಯಾಕೋಡ ಜಿಲ್ಲೆಗೆ ಪ್ರಥಮ



**ಉದಯರಶ್ಮಿ ನ್ಯೂಸ್**

ಸಿಂದಗಿ: ಬೆಂಗಳೂರಿನ ಇಸ್ಕಾನ್ ಸಂಸ್ಥೆ ಅಡಿಯಲ್ಲಿ ನಡೆದ ಭಗವದ್ಗೀತೆ ಆಧರಿಸಿದ ಮೌಲ್ಯ ಶಿಕ್ಷಣ ಸ್ಪರ್ಧೆಯಲ್ಲಿ ಪಟ್ಟಣದ ಮಾತಾ ಲಕ್ಷ್ಮೀ ಪಬ್ಲಿಕ್ ಶಾಲೆಯ 7ನೇ ತರಗತಿಯ ವಿದ್ಯಾರ್ಥಿ ಋತ್ವೀಕ ಬ್ಯಾಕೋಡ ಜಿಲ್ಲೆಗೆ ಪ್ರಥ–ಮ ಸ್ಥಾನ ಪಡೆದುಕೊಂಡಿರುತ್ತಾನೆ. ಮತ್ತು ಇಸ್ರೋ ಪ್ರವಾಸಕ್ಕೂ ಆಯ್ಕೆಯಾಗಿದ್ದಾನೆ.

ಈ ವೇಳೆ ಆಂಟ್. ಎಸ್.ಟಿ.ಆರ್.ಎ.ಸಿ ಇಸ್ರೋ ಸಹ ನಿರ್ದೇಶಕ ರಾಮಕೃಷ್ಣ ಅವರು ವಿದ್ಯಾರ್ಥಿಗೆ ಬೈಸಿಕಲ್ ಮತ್ತು ಪದಕವನ್ನು ನೀಡಿ ಗೌರವಿಸಿದರು.

ವಿದ್ಯಾರ್ಥಿಯ ಈ ಸಾಧನೆಗೆ ಶಾಲೆಯ ಅಧ್ಯಕ್ಷ ಸಂಜೀವ ದೇಶಪಾಂಡೆ, ಪ್ರವೀಣ ಹಾಲಹಳ್ಳಿ, ನಿರ್ದೇಶಕ ಮಂಡಳಿ, ಪ್ರಾಚಾರ್ಯ ಪ್ರಸನ್ನ ಕುಲಕರ್ಣಿ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಪಾಲಕರು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಮಾಜಿ ಸೈನಿಕರ ಅವಲಂಬಿತರಿಗೆ ಗುರುತಿನ ಚೀಟಿ ವಿತರಣೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮಾಜಿ ಸೈನಿಕರ ಪತ್ನಿ, ಮಕ್ಕಳಿಗೆ, ಕಾನೂನುಬದ್ಧವಾಗಿ ದತ್ತು ಪಡೆದ ಮಕ್ಕಳು ಸೇರಿದಂತೆ ಹಾಗೂ ಅವಲಂಬಿತರಿಗೆ(ಮಕ್ಕಳ ವಯಸ್ಸು 25 ವರ್ಷ ಮೀ–ರಿರಬಾರದು ಹಾಗು ಉದ್ಯೋಗಿ ಆಗಿರಬಾರದು) ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮರಣ ಹೊಂದಿದ ವೀರ ಯೋಧರ ಅವಲಂಬಿತರಿಗೆ ಡಿಪೆನ್‌ಡೆಂಟ್ ಕಾರ್ಡ ವಿತರಿಸಲಾಗುವುದು. ಎಲ್ಲಾ ಮೂಲಗಳಗಳಿಂದ ಪೋಷಕರ ಮಾಸಿಕ ಆಧಾಯ 9 ಸಾವಿರ ಮೀರಿರಬಾರದು , ಡಿಪೆನ್‌ಡೆಂಟ್ ಕಾರ್ಡ ಮಾಡಲು ಬೇಕಾಗಿರುವ ದಾಖಲಾತಿಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಡಿಸಿ ಕಚೇರಿ ಕೌಂಪೌಡ್ ಹತ್ತಿರ ಅಥವಾ ಕಚೇರಿಯ ದೂ.ಸಮಖ್ಯೆ 08352–250913ಗೆ ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸುಂದರವಾದ ಮನೆ ಕಟ್ಟಿದರೆ ಸಾಲದು, ಅದರಲ್ಲಿ ಸುಖವಾಗಿ ಬದುಕುವುದನ್ನು ಕಲಿಯಬೇಕು

**ಉದಯರಶ್ಮಿ ದಿನಪತ್ರಿಕೆ**


ಎಲ್ಲರಿಗೂ ತಮ್ಮ ಮದುವೆಯೆಂದರೆ ಒಂದೊಂದು ರೀತಿಯ ಕನಸುಗಳಿರುವುದು ಸಹಜ. ಅದೇ ರೀತಿ ಜಾಗೂರು ಎಂಬ ಊರಿನಲ್ಲಿ ತೇಜಸ್ ಎಂಬ ಯುವಕನು ತನ್ನ ಮದುವೆಯ ಬಗ್ಗೆ ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಂಡಿದ್ದು, ಪಕ್ಕದ ಹಳ್ಳಿಯ ಸೌಂದರ್ಯವತಿಯಾದ ರೀತಾ ಎಂಬ ಯುವತಿಯನ್ನು ಮನಮೆಚ್ಚಿ ಮದುವೆಯಾದ. ಸೌಂದರ್ಯದ ಆರಾಧಕನಾದ ತೇಜಸ್ ರೀತಾಳನ್ನು ಬಹಳ ಇಷ್ಟಪಡುತ್ತಿದ್ದ. ಆಕೆಗೆ ಯಾವುದರಲ್ಲೂ ಕೊರತೆಯಾಗದಂತೆ ಹೂವಿನಂತೆ ಜತನದಿಂದ ನೋಡಿಕೊಳ್ಳುತಿದ್ದ.

ವರ್ಷಗಳು ಉರುಳುತ್ತಿದ್ದಂತೆ ಆಕೆಯ ಸೌಂದರ್ಯವು ನಿಧಾನವಾಗಿ ಕಡಿಮೆಯಾಗಲಾರಂಭಿಸಿತು. ತನ್ನ ಸೌಂದರ್ಯದ ಆರಾಧಕನಾಗಿದ್ದ ತೇಜಸ್ ತನ್ನ ಕಳೆಗುಂದಿದ ಸೌಂದರ್ಯದಿಂದ ಎಲ್ಲಿ ತನ್ನನ್ನು ಬಿಟ್ಟು ಹೋಗುತ್ತಾನೋ ಎನ್ನುವ ಭಯದಿಂದ ರೀತಾ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅತಿಯಾಗಿ ಸೌಂದರ್ಯವರ್ಧಕಗಳನ್ನು ಬಳಸಲಾರಂಭಿಸಿದಳು. ಸೌಂದರ್ಯವರ್ಧಕದ ಅತೀ ಬಳಕೆಯಿಂದ ಆಕೆಯು ಚರ್ಮರೋಗಕ್ಕೆ ತುತ್ತಾಗಿ ಮಾನಸಿಕ ಖಿನ್ನತೆಗೆ ಒಳಗಾದಳು.

ವಾಹನವೊಂದರಲ್ಲಿ ಪ್ರಯಾಣಿಸುತ್ತಿದ್ದ ತೇಜಸ್ ಅಪಘಾತವೊಂದರಲ್ಲಿ ತನ್ನೆರಡೂ



ಕಣ್ಣುಗಳನ್ನು ಕಳೆದುಕೊಂಡ. ಹೀಗಾದರೂ ರೀತಾ ಮತ್ತು ತೇಜಸ್‌ರ ದಾಂಪತ್ಯ ಅತ್ಯಂತ ಸಂತೃಪ್ತಿಯಿಂದಲೇ ಇತ್ತು. ಕಣ್ಣಿಲ್ಲದ ತನ್ನ ಗಂಡ ತೇಜಸ್‌ನನ್ನು ರೀತಾ ಸಣ್ಣ ಮಗುವಿನಂತೆ ನೋಡಿಕೊಳ್ಳುತಿ–ದ್ದಳು. ಚರ್ಮ ರೋಗಕ್ಕೆ ತುತ್ತಾಗಿದ್ದ ರೀತಾ ದಿನದಿಂದ ದಿನಕ್ಕೆ ಕುರೂಪಳಾಗುತ್ತಿದ್ದಳು. ಇದ್ಯಾವುದೂ ತೇಜಸ್‌ಗೆ ಕಾಣುತ್ತಿರಲಿಲ್ಲವಾದ್ದರಿಂದ ಇಬ್ಬರ ನಡುವೆ ಸ್ವಲ್ಪವೂ ಪ್ರೀತಿ ಕಡಿಮೆಯಾಗಲಿಲ್ಲ. ಅಚಾನಕ್ಕಾಗಿ ರೀತಾ ಚರ್ಮರೋಗದಿಂದ ತೀರಿಕೊಂಡಾಗ ತೀರಾ ದುಖಿಃತನಾದ ತೇಜಸ್ ಆಕೆಯ ಕಾರ್ಯಗಳನ್ನೆಲ್ಲ ಅಚ್ಚುಕಟ್ಟಾಗಿ ಮಾಡಿ ಆ ಊರನ್ನೇ ಬಿಟ್ಟು ಹೊರಟು ನಿಂತ. ಆಗ ತೇಜಸ್‌ನ ಗೆಳೆಯನಾದ ಸಂಜಯನು ಇಷ್ಟು ದಿನ ಕಣ್ಣಿಲ್ಲದ ನಿನ್ನನ್ನು ನಿನ್ನ ಪತ್ನಿಯು ಮಗುವಿನಂತೆ ಆರೈಕೆ ಮಾಡಿದಳು. ಇನ್ನು ಮುಂದೆ ಒಂಟಿಯಾಗಿರುವ ನೀನು ಹೇಗೆ ಜೀವನ ನಡೆಸುತ್ತೀಯಾ ಎಂದು ಕೇಳಿದ. ಆಗ ಗದ್ಗದಿತನಾದ ತೇಜಸ್ ಗೆಳೆಯಾ ನಾನು ಕುರುಡನಲ್ಲ, ಆದರೆ ಕುರುಡನಂತೆ ನಾನು ನಟಿಸುತ್ತಿದ್ದೆ. ರೀತಾ ಚರ್ಮ ರೋಗದಿಂದ ಕುರೂಪಿಯಾಗಿದ್ದಳು. ಆಕೆಯ ಕುರೂಪತೆಯಿಂದ ನಾನು ಆಕೆಯನ್ನು ಮೊದಲಿನಷ್ಟು ಪ್ರೀತಿಸಲಾರೆನೆಂಬ ನೋವು ಆಕೆಯ ಖಾಯಿಲೆಯ ನೋವಿಗಿಂತಲೂ ಹೆಚ್ಚಾಗಿತ್ತು. ಆಕೆಯ ಆ ನೋವನ್ನು ನನ್ನಿಂದ ನೋಡಲಾಗುತ್ತಿರಲಿಲ್ಲ. ಆಕೆ ಸದಾ ನಗುತ್ತಿರಬೇಕೆಂಬುದೇ ನನ್ನಾಸೆಯಾಗಿತ್ತು. ರೀತಾಳು ನನ್ನ ಪ್ರೀತಿಯ ತೋಳುಗಳಲ್ಲೇ ಕೊನೆಯ ಕ್ಷಣಗಳನ್ನು ಕಳೆಯಬೇಕೆಂದು ಬಯಸಿ ಅವಳನ್ನು ಇನ್ನಷ್ಟು ಪ್ರೀತಿಸಿದೆ. ನನ್ನ ಪ್ರೀತಿಯ ತೆಕ್ಕೆಯಲ್ಲೇ ಆಕೆ ಕೊನೆಯುಸಿರೆಳೆದಳು ಎಂದು ಹೇಳಿ ತೇಜಸ್ ಗಳಗಳನೇ ಅತ್ತುಬಿಟ್ಟ.



ಸೌಂದರ್ಯ ಪ್ರಜ್ಞೆಯಿರಬೇಕು ನಿಜ, ಆದರೆ ಸೌಂದರ್ಯವೇ ಸರ್ವಸ್ವವಲ್ಲ. ಅಚಾನಕ್ಕಾಗಿ ಯಾವುದೇ ಸನ್ನಿವೇಶಗಳು ಬಂದರೂ ಅವುಗಳನ್ನು ಸರಿಯಾಗಿ ಅರ್ಥೈಸಿಕೊಂಡು, ಪರಸ್ಪರರ ಕುಂದು ಕೊರತೆ, ದೌರ್ಬಲ್ಯಗಳನ್ನು ಬದಿಗೊತ್ತಿ ಹೊಂದಾಣಿಕೆಯಿಂದ ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು. ಮನುಷ್ಯ ಕೇವಲ ಐಶ್ವರ್ಯವನ್ನು ಗಳಿಸಿ, ಸುಂದರವಾದ ಮನೆಯನ್ನು ಕಟ್ಟಿದರಷ್ಟೆ ಸಾಲದು, ಆ ಐಶ್ವರ್ಯದೊಂದಿಗೆ ಮತ್ತು ಕಟ್ಟಿದ ಸುಂದರ ಮನೆಯಲ್ಲಿ ಸುಖವಾಗಿ ಬಾಳಿ ಬದುಕುವುದನ್ನು ಕಲಿಯದಿದ್ದರೆ, ಐಶ್ವರ್ಯ ಯಾ ಮನೆಗೆ ಯಾವ ಮೌಲ್ಯವೂ ಬರುವುದಿಲ್ಲ. ನಾವು ಗಳಿಸುವ ಆಸ್ತಿ, ಅಂತಸ್ತು, ಸೌಂದರ್ಯ, ಗೆಳೆಯರು ಮತ್ತು ಐಶ್ವರ್ಯವನ್ನು ಸರಿಯಾಗಿ ಬಳಸಿಕೊಂಡು ಪರಸ್ಪರ ಸಂತೃಪ್ತಿಯಿಂದ ಬದುಕುವ ಕಲೆಯನ್ನು ಗಳಿಸಿದಾಗ ಮಾತ್ರ ನಾವು ಗಳಿಸಿದ ಎಲ್ಲಕ್ಕೂ ಮೌಲ್ಯ ಬರುತ್ತದೆ. ನಾವು ಆಸ್ತಿ, ಅಂತಸ್ತು ಮತ್ತು ಐಶ್ವರ್ಯವನ್ನು ನಿಯಂತ್ರಿಸಬೇಕೇ ವಿನಃ ಅವ್ಯಾವುದೂ ನಮ್ಮನ್ನು ನಿಯಂತ್ರಿಸಬಾರದು.



– ಸಂತೋಷ್ ರಾವ್ ಪೆರ್ಮುಡ,
ಪೆರ್ಮುಡ ಮನೆ, ಪಟ್ರಮೆ ಗ್ರಾಮ
ಮತ್ತು ಅಂಚೆ ಬೆಳ್ತಂಗಡಿ ತಾಲೂಕು,



# ಸೊಳ್ಳೆ ನಿರ್ಮೂಲನೆ ಬಗ್ಗೆ ಎಚ್ಚರ ವಹಿಸಿ :ಡಾ.ಸಂಗಮೇಶ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಸೊಳ್ಳೆಗಳ ಕಡಿತದಿಂದ ಮಲೇರಿಯಾ, ಡೆಂಗಿ ಚಿಕುನ್‌ಗುನ್ಯಾ, ಮೆದುಳು ಜ್ವರ, ಆನೆಕಾಲು ರೋಗ ಸೇರಿದಂತೆ ವಿವಿಧ ಬಗೆಯ ಖಾಯಿಲೆಗಳು ಹರಡುತ್ತಿದ್ದು, ಸೊಳ್ಳೆಗಳನ್ನು ನಿಯಂತ್ರಣ ಮಾಡಿದಲ್ಲಿ ಇಂತಹ ಖಾಯಿಲೆಗಳನ್ನು ತಡೆಗಟ್ಟಬಹುದು. ಹಾಗಾಗಿ ಸಾರ್ವಜನಿಕರು ಸೊಳ್ಳೆ ಸಂತಾನೋತ್ಪತ್ತಿ ತಾಣಗಳ ಬಗ್ಗೆ ಜಾಗೃತಿ ವಹಿಸಿ ಸೊಳ್ಳೆ ನಿರ್ಮೂಲನೆ ಬಗ್ಗೆ ಎಚ್ಚರ ವಹಿಸಬೇಕು ಎಂದು ತಾಲೂಕಿನ ತಂಗಡಗಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾ–ರಿಗಳಾದ ಡಾ.ಸಂಗಮೇಶ ದಶವಂತ ಹೇಳಿದರು.

ಪಟ್ಟಣದ ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಲೇರಿಯಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಸೊಳ್ಳೆಗಳಿಂದ ಪ್ರಸಾರವಾಗುವ ರೋಗಗಳಲ್ಲಿ ಮಲೇರಿಯಾ ರೋಗವು ಕೂಡ ಒಂದು. ಇದು ಪ್ಲಾಸ್ಮೋಡಿಯಾ ಎಂಬ ಸೂಕ್ಷ್ಮಾಣು ಪರಾವಲಂಬಿ ಮೂಲಕ ಬರುತ್ತದೆ. ಹೆಣ್ಣು ಅನಾಫಿಲಿಸ್ ಸೊಳ್ಳೆಯು ಮಲೇರಿಯಾ ಸೋಂಕಿತ ವ್ಯಕ್ತಿಗೆ ಕಚ್ಚಿ ರಕ್ತ ಹೀರಿ ಆರೋಗ್ಯವಂತ ವ್ಯಕ್ತಿಗೆ ಕಚ್ಚುವುದರಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಮಲೇರಿಯಾ ರೋಗದ ಲಕ್ಷಣಗಳಲ್ಲಿ ಮೊದಲು ಚಳಿ ನಂತರ ವಿಪರೀತ ಜ್ವರ ಬಂದು ಕೊನೆಗೆ ಬೆವರುವಿಕೆಯಿಂದ ಆರಾಮ ಎನಿಸುತ್ತದೆ. ಇದೇ ಲಕ್ಷಣಗಳು ಪುನರಾವರ್ತನೆಗೊಳ್ಳುತ್ತದೆ. ಇದೇ ಅವಧಿಯಲ್ಲಿ ರಕ್ತ ಲೇಪನವನ್ನು ತೆಗೆದು ಪರೀಕ್ಷೆ ಮಾಡಿದಾಗ ಮಲೇ–ರಿಯಾ ರೋಗವೆಂದು ಖಚಿತ ಪಡಿಸಬಹುದು. ಮಲೇರಿಯಾ ರೋಗವೆಂದು ಖಚಿತಪಟ್ಟಾಗ ತಕ್ಷಣ ಚಿಕಿತ್ಸೆ ತೆಗೆದುಕೊಳ್ಳುವುದ–ರಿಂದ ಸಂಪೂರ್ಣ ಗುಣವಾಗುತ್ತದೆ. ಕಾರಣ ಸಾರ್ವಜನಿಕರು ಯಾವುದೇ ಜ್ವರ ಬಂದಾಗ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹತ್ತಿರ ಅಥವಾ ಸಮೀಪದ ಸರಕಾರಿ ಆಸ್ಪತ್ರೆಯಲ್ಲಿ ರಕ್ತಲೇಪನ ತಗೆಸಿ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು

ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಅನುಸೂಯಾ ತೇರದಾಳ ಮಾತನಾಡಿ, ಮಲೇ–ರಿಯಾ ರೋಗವನ್ನು ಸಂಪೂರ್ಣ ನಿಯಂತ್ರಿಸುವಲ್ಲಿ 2025 ರೊಳಗೆ ಮಲೇರಿಯಾ ನಿರ್ಮೂಲನೆಗೆ ಪಣ ತೊಡೋಣ, ಮಲೇರಿಯಾ ಮುಕ್ತ ಸಮಾಜ ನಿರ್ಮಿಸೋಣ ಮತ್ತು ಒಳಿತಿಗಾಗಿ ಮಲೇರಿಯಾ ಕೊನೆಗೊಳಿಸೋಣ ಎಂಬ ಈ ಸಾಲಿನ ಘೋಷಣೆಯಂತೆ ಮನೆ ಸುತ್ತಲಿನ ಪರಿಸರ ಸ್ವಚ್ಚವಾಗಿಟ್ಟುಕೊಳ್ಳುವುದರ ಜೊತೆಗೆ ಮನೆಯಲ್ಲಿ ಮತ್ತು ಮನೆ ಸುತ್ತಮುತ್ತ ಸೊಳ್ಳೆಗಳು ನಿಂತ ನೀರಿನಲ್ಲಿ ಮೊಟ್ಟೆ ಇಟ್ಟು ಸಂತಾನೋತ್ಪತ್ತಿ ಮಾಡುತ್ತವೆ. ಸೊಳ್ಳೆಗಳ ಸಂತತಿ ಕಡಿಮೆ ಮಾಡಲು ಪರಿಸರದಲ್ಲಿ ಹಾಗೂ ಮನೆಯ ಸುತ್ತಮುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ಪರದೆ, ಬೇವಿನ ಸೊಪ್ಪಿನ ಹೊಗೆ, ಸೊಳ್ಳೆ ಬತ್ತಿ ಹಾಗೂ ಸೊಳ್ಳೆ ಬ್ಯಾಟ್ ಮುಖಾಂತರ ಸೊಳ್ಳೆಗಳನ್ನು ನಿಯಂತ್ರಿಸಬಹುದು ಎಂದರು.

ಈ ವೇಳೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಯಲ್ಲಪ್ಪ ಛಲವಾದಿ, ಎ.ಐ.ಕೇಶಾಪುರ, ಐ.ಸಿ.ಮಾನಕರ್, ಎಸ್.ಸಿ.ರುದ್ರವಾಡಿ, ಎಸ್.ಐ.ಕಮಲಪ್ಪನವರ, ಸಿ.ಜಿ.ಬಿದರಕುಂದಿ, ಸಿದ್ದು ಬಿದಗೊಂಡ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ಇಂದು ಮಾಜಿ ಸಿಎಂ ಯಡಿಯೂರಪ್ಪಗೆ ಅದ್ದೂರಿ ಸ್ವಾಗತ :ನಡಹಳ್ಳಿ

**ಉದಯರಶ್ಮಿ ನ್ಯೂಸ್**




ಮುದ್ದೇಬಿಹಾಳ: ನಮ್ಮ ಅವಧಿಯಲ್ಲಿ ಮುದ್ದೇಬಿಹಾಳ ಮತಕ್ಷೇತ್ರ ಇಷ್ಟೊಂದು ಅಭಿವೃದ್ಧಿ ಕಂಡಿದೆ ಎಂದರೆ ಅದಕ್ಕೆ ಯಡಿಯೂರಪ್ಪನವರ ಆಶೀರ್ವಾದ ಬಹಳ ಇದೆ. ಕರ್ನಾಟಕದಲ್ಲಿಯೇ ಅತೀ ಹೆಚ್ಚು ಅನುದಾನವನ್ನು ನಮ್ಮ ಭಾಗಕ್ಕೆ ಕೊಟ್ಟ ಪುಣ್ಯಾತ್ಮ ಅವರು. ಅವರ ಋಣವನ್ನು ಯಾವತ್ತೂ ನಮ್ಮ ಜನತೆ ಮುಟ್ಟಿಸಲು ಸಾಧ್ಯವಿಲ್ಲ. ನಾಳೆ ಲೋಕಸಭಾ ಚುನಾವಣಾ ಪ್ರಚಾರಾರ್ಥವಾಗಿ ಮಾ.27 ರಂದು ಪಟ್ಟಣಕ್ಕೆ ಅವರು ಆಗಮಿಸಲಿದ್ದು ಅತ್ಯಂತ ಅದ್ದೂರಿಯಾಗಿ ಅವರನ್ನು ಸ್ವಾಗತಿಸಲು ತಯಾರಿ ಮಾಡಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ, ಭಾಜಪಾ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

> “ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾನು ಸೋತಿದ್ದು ನಮ್ಮ ತಪ್ಪಿನಿಂದಲ್ಲ. ನನ್ನ ಅಭಿವೃದ್ಧಿ ನೋಡಿ ಕೆಲವರ ಹೊಟ್ಟೆಕಿಚ್ಚಿನ ದೃಷ್ಟಿ ಬಿದ್ದ ಪರಿಣಾಮ ನಾನು ಸೋಲನುಭವಿಸಿದ್ದೇನೆ. ಈ ಸೋಲು ಬಹು ದೊಡ್ಡ ಸೋಲೇನು ಅಲ್ಲ.”
>
> **– ಎ.ಎಸ್.ಪಾಟೀಲ ನಡಹಳ್ಳಿ,** ಭಾಜಪಾ ರೈತಮೋರ್ಚಾ ರಾಜ್ಯಾಧ್ಯಕ್ಷರು

ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ಶುಕ್ರವಾರ ಸಂಜೆ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಬೆಳಿಗ್ಗೆ 10 ಗಂಟೆಗೆ ಅವರ ಆಗಮನದ ಬಳಿಕ ಪತ್ರಿಕಾಗೋಷ್ಠಿ ನಡೆಸಿ ಮಾತನಾಡುವರು. ನಂತರ ಪಟ್ಟಣದ ಅಂಬೇಡ್ಕರ ವೃತ್ತದಿಂದ, ಬಸವೇಶ್ವರ ವೃತ್ತ, ಮುಖ್ಯ ಬಜಾರ, ಇಂದಿರಾ ವೃತ್ತ ಮಾರ್ಗವಾಗಿ ಬನಶಂಕರಿ ದೇವಸ್ಥಾನದವರೆಗೆ ತೆರೆದ ವಾಹನದ ಮೂಲಕ ಮತಯಾಚನೆ ನಂತರ ಬಹಿರಂಗ ಸಭೆಯಲ್ಲಿ ಜನತೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಪಟ್ಟಣದ ಪ್ರತೀ ವಾರ್ಡ ನಿಂದ 200 ಜನ ಸೇರಿದಂತೆ ಮತಕ್ಷೇತ್ರದಿಂದ ಅಂದಾಜು 15 ರಿಂದ 20 ಸಾವಿರ ಜನ ಭಾಗಿಯಾಗುವ ಸಾಧ್ಯತೆ ಇದ್ದು ಕಾರಣ ಎಲ್ಲ ಭಾಜಪಾ ಕಾರ್ಯಕರ್ತರು, ಯಡಿಯೂರಪ್ಪನವರ ಅಭಿಮಾನಿಗಳು ಈ ಶೋಭಾಯಾತ್ರೆಯಲ್ಲಿ ಮತ್ತು ಬಹಿರಂಗ ಸಭೆಯಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಯಡಿಯೂರಪ್ಪನವ–ರಿಂದಲೇ ಚಿಮ್ಮಲಗಿ–ಮುಳವಾಡ ಏತ ನೀರಾವರಿಯಾಗಿದ್ದು. 2012 ರಲ್ಲಿ ನಾನು ಬಂಡಿ ಯಾತ್ರೆ ಮಾಡಿದ್ದೆ. ಆವಾಗಲೇ ಟೆಂಡರ್ ಆಗಿದ್ದು. ನನ್ನ ಬಳಿ ದಾಖಲೆಗಳಿವೆ. ನಾರಾಯಣಪುರ ಹಿನ್ನೀರಿನ ದಡದ ಕೆಲ ಹಳ್ಳಿಗಳ ಮುಳುಗಡೆ ನಂತರ ಪುನರ್ವಸತಿ ಕೇಂದ್ರಗಳಾಗಿ ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿರಲಿಲ್ಲ. ಈ ಕು–ರಿತು ನಾನು ಅವರಲ್ಲಿ ಮನವಿ ಮಾಡಿದಾಗ 120 ಕೋಟಿ ಪ್ರೊಜೆಕ್ಟ್ ಅಪ್ರೂ ಮಾಡಿ ಅರ್ಧ ಹಣ ಕೂಡ ಬಿಡುಗಡೆ ಮಾಡಿದ್ರು. ಕೆಲಸವನ್ನೂ ಮಾಡಲಾಯಿತು ಮುಂದಿನ ಕೆಲಸ ಮಾಡಲು ಕೋರೋನಾ ಅಡ್ಡವಾಯಿತು. ಹೀಗೆ ಸಾವಿರಾರು ಕೋಟಿ ಅನುದಾನ ನಮ್ಮ ಭಾಗಕ್ಕೆ ಕೊಟ್ಟ ಕರ್ನಾಟಕದ ಭೀಷ್ಮ ನಮ್ಮೂ–ರಿಗೆ ಆಗಮಿಸುತ್ತಿದ್ದು ಮತಕ್ಷೇತ್ರದ ಎಲ್ಲ ಜನತೆ ಭಾಗಿಯಾಗಬೇಕು ಎಂದರು. ಈ ವೇಳೆ ಭಾಜಪಾ ಪಕ್ಷದ ಪ್ರಮುಖರಾದ ಮಲಕೇಂದ್ರಗೌಡ ಪಾಟೀಲ, ಸಿದ್ದರಾಜ ಹೊಳಿ, ಅಶೋಕ ರಾಠೋಡ, ರವೀಂದ್ರ ಬಿರಾದಾರ, ಜಗದೀಶ ಪಂಪಣ್ಣವರ, ಶ್ರೀಶೈಲ ದೊಡಮನಿ, ಎಂ.ಆರ್.ಪಾಟೀಲ ವಕೀಲರು ಸೇರಿದಂತೆ ಮತ್ತಿತರರು ಇದ್ದರು.

ನಾವು ಹಿಂದೂ ಪಕ್ಷದವರು ಅಂತಾ ನಮಗೆ ಮುಸ್ಲಿಂ ಸಮಾಜ ಬಾಂಧವರು ಬೆಲೆ ಕೊಟ್ಟಿಲ್ಲ. ಆದರೆ ನಾವು ಯಾವತ್ತೂ ನಿಮ್ಮನ್ನು ವಿರೋಧ ಮಾಡಿಲ್ಲ. ಎಲ್ಲಿಯವರೆಗೆ ನೀವು ಕಾಂಗ್ರೆಸ್ಸಿನ ಗುಲಾಮರಾಗಿರುತ್ತೀರೋ ಅಲ್ಲಿಯವರೆಗೆ ಈ ತಾಲೂಕಿನ ಅಭಿವೃದ್ಧಿಗೆ ನೀವೇ ಅಡ್ಡಲಾಗಿರ್ತೀರಿ. ಕಾಂಗ್ರೆಸ್ಸಿನ ಬವ್ವಾ ಗೆ ನೀವು ಬೆಲೆ ಕೊಡಬೇಡಿ ಎಂದು ಮಾಜಿ ಶಾಸಕ ನಡಹಳ್ಳಿ ಅವರು ಮುಸ್ಲಿಂ ಸಮಾಜ ಬಾಂಧವರಿಗೆ ಹೇಳಿದರು.

# ಬಾಲ್ಯ ವಿವಾಹ: 7 ಆರೋಪಿಗಳಿಗೆ ಶಿಕ್ಷೆ ಪ್ರಕಟ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಪ್ರಾಪ್ತ ಬಾಲಕಿಯನ್ನು ವಿವಾಹವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಗೆ ವಿಜಯಪುರದ ಜೆ.ಎಮ್.ಎಫ್.ಸಿ ನ್ಯಾಯಾಲಯವು 07 ಆರೋಪಿಗಳಿಗೆ 01 ವರ್ಷ ಕಠಿಣ ಜೈಲು ಹಾಗೂ ರೂ. 10,000/– ದಂಡ ವಿಧಿಸಿ ಶಿಕ್ಷೆ ನೀಡಿ ಆದೇಶ ಹೊರಡಿಸಿದ್ದು, ಇನ್ನೂ ಇಬ್ಬರೂ ಆರೋಪಿಗಳು ವಿಚಾರಣೆ ಬಾಕಿ ಇದ್ದ ಸಂದರ್ಭದಲ್ಲಿ ಮೃತರಾಗಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಜಿಲ್ಲಾಧಿಕಾರಿ ಟಿ.ಭೂಬಾಲನ್, ವಿಜಯಪುರ ನಗರದ ಆದಿಲ್ ಶಾಹಿ ಮಂಗಲ ಕಾರ್ಯಾಲಯದಲ್ಲಿ ದಿನಾಂಕ : 30–08–2018 ರಂದು ಗೋಡಿಹಾಳ ಕಾಲೋನಿಯ ಅಪ್ರಾಪ್ತ ಬಾಲಕಿಯನ್ನು ಸದ್ದಾಂ ಹುಸೇನ್ ಸಲೀಂ ಶೇಖ ಎಂಬ ಯುವಕನ ಜೊತೆ ಬಾಲ್ಯವಿವಾಹ ಮಾಡಿದ್ದರು. ಬಾಲ್ಯವಿವಾಹ ಮಾಡಿ, ಪ್ರೋತ್ಸಾಹಿಸಿದ ಹಾಗೂ ಭಾಗಿಯಾದ ಕಾಶಿಂಸಾಬ್ ಇಮಾಮ್‌ಸಾಬ ಶೇಖ, ರಾಜಾಬಿ ಕಾಶಿಂಸಾಬ್ ಶೇಖ, ಸದ್ದಾಂಹುಸೇನ್ ಸಲೀಂ ಶೇಖ, ಸಲೀಂ ಹುಸೇನ ಶೇಖ, ಮಜರ ಸಲೀಂ ಶೇಖ, ಶಹಜಾನ ರಂಜಾನ ಶೇಖ, ನಬಿರಸೂಲ ಖಾದರಪಟೇಲ್ ಸೀತನೂರ, ಅಬ್ದುಲರಜಾಕ್ ಭಾಷಾಸಾಬ ಬಿದ್ನಾಳ ಹಾಗೂ ಖಾಲಿದ ತಾಜುದ್ದೀನ ಪಟೇಲ ಹೀಗೆ ಒಟ್ಟು 09 ಜನರ ವಿರುದ್ಧ 31–08–2018 ರಂದು ಗೋಲ್‌ಗುಂಬಜ್ ಪೊಲೀಸ್ ಠಾಣೆಯಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ಕಲಂ 9, 10 ರಡಿಯಲ್ಲಿ ಗುನ್ನಾ ಸಂಖ್ಯೆ 135/2018 ಪ್ರಕರಣ ದಾಖಲಿಸಲಾಗಿತ್ತು.

ಸದರಿ ಪ್ರಕರಣದಲ್ಲಿ ಕಾರ್ಯಾಚರಣೆ ನಡೆಸಿದ ಆಗಿನ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಿರ್ಮಲಾ ಸುರಪುರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಮೌನೇಶ ಪೋತದಾರ, ಗುರುರಾಜ ಇಟಗಿ, ಮಕ್ಕಳ ಸಹಾಯವಾಣಿ 1098 ಸಂಯೋಜಕರಾದ ಸುನಂದಾ ತೋಳಬಂದಿ, ಮಿನಾಕ್ಷಿ ಕುಲಕರ್ಣಿ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಶ್ರೀಧರ ಕುಲಕರ್ಣಿ, ಸಮಿತಿ ಸದಸ್ಯರಾದ ಯಲ್ಲಪ್ಪ ಇರಕಲ, ದಾನೇಶ ಅವಟಿ, ಹಾಗೂ ಆಗಿನ ಗೋಲ್‌ಗುಂಬಜ್ ಪೊಲೀಸ ಠಾಣೆ ಪಿ.ಎಸ್.ಐ ರಾಜಕುಮಾರ ಹಳ್ಳಿ ಹಾಗೂ ಮಕ್ಕಳ ವಿಶೇಷ ಪೊಲೀಸ್ ಘಟಕದ ಸಿಬ್ಬಂದಿಯಾದ ಪೂನಮ್ ಪೋಳ ಹಾಗೂ ಸದರಿ ಪ್ರಕರಣದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರ್ಯನಿರ್ವಹಿಸಿದ ಎಲ್ಲ ಸಿಬ್ಬಂದಿ ವರ್ಗದವರಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾ–ರಿಗಳು ಆದ ಟಿ.ಭೂಬಾಲನ್ ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

### ಪುರಾಣ ಪ್ರಾರಂಭೋತ್ಸಕ್ಕೆ ಚಾಲನೆ ನೀಡಿದ ಡಾ.ವಿಶ್ವರಾಧ್ಯ ಶಿವಾಚಾರ್ಯ ಅಭಿಮತ

# ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ನೆಮ್ಮದಿ

**ಉದಯರಶ್ಮಿ ನ್ಯೂಸ್**



ಬ್ರಹ್ಮದೇವನಮಡು: ಪ್ರತಿಯೊಬ್ಬರೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಮಾನಸಿಕ ನೆಮ್ಮದಿ ಕಂಡಕೊಳ್ಳಬೇಕು ಎಂದು ಮಾಗಣಗೇರಿಯ ಬೃಹನ್ಮಠದ ಶಿವಾಚಾರ್ಯ ರತ್ನ ಪ್ರಶಸ್ತಿ ಪುರಸ್ಕೃತ ಡಾ.ವಿಶ್ವರಾಧ್ಯ ಶಿವಾಚಾರ್ಯರು ಹೇಳಿದರು.

ಸಿಂದಗಿ ತಾಲೂಕಿನ ಸುಕ್ಷೇತ್ರ ಹೊನ್ನಳ್ಳಿ – ಬ್ರಹ್ಮದೇವನಮಡು ಗ್ರಾಮದ ಶ್ರೀ ಕಲ್ಯಾಣದೇಶ್ವರ ಜಾತ್ರೆ ಅಂಗವಾಗಿ ಗುರುವಾರ ರಾತ್ರಿ ಹಮ್ಮಿಕೊಂಡಿದ್ದ ಮಹಾ ಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಮಹಾ ಪುರಾಣ ಪ್ರಾರಂಭೋತ್ಸಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜದ ಉದ್ದಾರಕ್ಕಾಗಿ ಶ್ರಮಿಸಿದ ಮಹಾ ಪುರಷರ ಜೀವನ ಚರಿತ್ರೆ ತಿಳಿಯಲು ಎಲ್ಲರೂ ಮುಂದಾಗಬೇಕು. ಬದುಕಿನಲ್ಲಿ ದಾನ ಧರ್ಮ ಮಾಡುವ ಮನೋಭಾವ ಬೆಳಸಿಕೊಳ್ಳಬೇಕು ಎಂದರು.

ಖಾನಾಪೂರದ ಮೌನಯೋಗಿ ಕಲ್ಯಾಣದಯ್ಯ ಸ್ವಾಮೀಜಿ, ಕುರಳಗೇರಾದ ಸಜ್ಜಾದೆ ನಶಿನ್ ದರ್ಗಾದ ಹಜರತ್ ಸಯ್ಯದ್ ಹುಸೇನ್ ಬಾಷಾ ದಿವ್ಯ ಸಾನ್ನಿಧ್ಯ ವಹಿಸಿದ್ದರು.ಶ್ರೀಮಠದ ಒಡೆಯ ಕಲ್ಯಾಣದಯ್ಯ ವೀರಘಂಟಯ್ಯ ಸ್ವಾಮೀಜಿ,ಚನ್ನಮಲ್ಲಯ್ಯ ಹಿರೇಮಠ, ಕಾಂಗ್ರೆಸ್ ಮುಖಂಡ ಮಲ್ಲಣ್ಣ ಸಾಲಿ ಪುರಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಾಜಿ ಎಪಿಎಂಸಿ ಅಧ್ಯಕ್ಷ ಹಳ್ಳೆಪ್ಪಗೌಡ ಚೌಧರಿ,ಹೊನ್ನಳ್ಳಿ ಗ್ರಾಪಂ ಅಧ್ಯಕ್ಷ ಸಂಗನಗೌಡ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ಯಂಕನಗೌಡ ಪಾಟೀಲ,ರಾಮರಾವ ದೇಶಮುಖ,ಬಾಪುಗೌಡ ದೇಶಮುಖ, ಮುರಗೆಪ್ಪಗೌಡ ರದ್ದೇವಾಡಗಿ, ಕಾಂಗ್ರೆಸ್ ಮುಖಂಡ ಬಸವರಾಜ ಮಾರಲಭಾವಿ, ಸಾಹೇಪಟೇಲ ಮುರಡಿ ಇದ್ದರು. ಪ್ರವಚನಕಾರ ಯಡ್ರಾಮಿ ವಿರಕ್ತ ಮಠದ ಸಿದ್ದಲಿಂಗ ಶಿವಯೋಗಿಗಳು ಪ್ರವಚನ ನೀಡಿದರು. ಕಟ್ಟಿಸಂಗಾವಿಯ ವೀರಭದ್ರಯ್ಯ ಹಿರೇಮಠ ಗವಾಯಿಗಳು ಸಂಗೀತ ಸೇವೆಯೊಂದಿಗೆ ರಮೇಶಕುಮಾರ ಕಟ್ಟಿಸಂಗಾವಿ ತಬಲಾ ಸಾಥ್ ನೀಡಿದರು.

# ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ದೇಶ ಒಂದು ಚುನಾವಣೆ ಸೂಕ್ತವೇ?

**ಉದಯರಶ್ಮಿ ನ್ಯೂಸ್**

ಸಾಯಬಣ್ಣ ಮಾದರ
(ಸಲಾದಹಳ್ಳಿ )



ಚುನಾವಣೆ ವ್ಯವಸ್ಥೆಯು ಬಗ್ಗೆ ನಮ್ಮ ಭಾರತ ಸಂವಿಧಾನ ರಚನಾ ಸಭೆಯಲ್ಲಿ ದೀರ್ಘವಾಗಿ ಚರ್ಚಿತವಾದ ವಿಷಯಗಳಲ್ಲೊಂದು ಚುನಾವಣಾ ಪ್ರಕ್ರಿಯೆ ಎಂಬುವುದು, ಭಾರತದ ಅತಿ ದೊಡ್ಡ ಸಯುಕ್ತ ಒಕ್ಕೂಟ ಇಲ್ಲಿ ನೂರಾರು ಭಾಷೆ, ವಿಭಿನ್ನ ಪ್ರಾದೇಶಿಕತೆ, ವಿವಿಧ ಧಾರ್ಮಿಕತೆ, , ಮುಂತಾದವು ವಿವಿಧತೆಯಲ್ಲಿ ಏಕತೆಯನ್ನು ಒಳಗೊಂಡಿದ್ದು, ದೇಶದಲ್ಲಿ ಚುನಾವಣೆ ನಡೆಸುವುದು ಒಂದು ಅತಿ ದೊಡ್ಡ ಸವಾಲಿನ ಕೆಲಸ ಎಂದು ಹೇಳಬಹುದು. ಅದಕ್ಕಾಗಿ ಸಂವಿಧಾನದಲ್ಲಿ ಚುನಾವಣೆ ಆಯೋಗಕ್ಕೆ ಪ್ರತ್ಯೇಕವಾದ ವಿಶೇಷ ಸ್ಥಾನವಿದೆ.

“ ಡಾ ಬಿ ಆರ್ ಅಂಬೇಡ್ಕರ್ ಹೇಳಿದಂತೆ ಇನ್ನು ಮುಂದೆ ರಾಜ್ಯರ ಹೊಟ್ಟೆಯಿಂದ ರಾಜರು ಹುಟ್ಟುವುದಿಲ್ಲ ಮತದಾರರ ಮತ ಪೆಟ್ಟಿಗೆಯಿಂದ ಹುಟ್ಟುತ್ತಾನೆ” ಎಂದು ಹೇಳಿದ್ದಾರೆ.

ಅದರಂತೆ ಭಾರತದಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆಗಳ ಆವರ್ತನ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳು ದೇಶದಲ್ಲಿ ಮುನ್ನೆಲೆಗೆ ಇತ್ತೀಚಿಗೆ ಬಂದಿವೆ ವಿಶಾಲ ಅಖಂಡ ಭಾರತದಲ್ಲಿ ಒಂದು ದೇಶ ಒಂದು ಚುನಾವಣೆ ಪರಿಕಲ್ಪನೆ ಯಶಸ್ವಿ ಆಗುತ್ತದೆ ಎಂದು ನಾವು ನೋಡುವುದಾದರೆ ಅದು ತುಂಬಾ ಜಟಿಲವಾದ ಕೆಲಸ ಎಂದು ಹೇಳಬಹುದು .

ಆದರೆ ಏಕ ಕಾಲದಲ್ಲಿ ಚುನಾವಣೆ ನಡೆಸುವುದರ ಬಗ್ಗೆ ವಿಚಾರಗಳು ನಮ್ಮ ದೇಶದಲ್ಲಿ ಹೊಸದೇನಲ್ಲ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಮೊದಲು ಲೋಕಸಭೆ ಮತ್ತು ಎಲ್ಲಾ ವಿಧಾನಸಭೆಗಳಿಗೆ 1951 –52ರ ಸಾರ್ವತ್ರಿಕ ಚುನಾವಣೆಗಳು ನಡೆದಿದ್ದವು ನಂತರ 1957ರಲ್ಲಿ ದೇಶದಲ್ಲಿ ಎಲ್ಲಾ ಚುನಾವಣೆಗಳು ಏಕಕಾಲದಲ್ಲಿ ನಡೆದಿದ್ದವು ತದನಂತರ 1957, 1962ರಲ್ಲಿ, ಮತ್ತು 1967ರಲ್ಲಿ ಮೂರು ಸಾರ್ವತಿಕ ಚುನಾವಣೆಗಳು ಲೋಕಸಭೆಯೊಂದಿಗೆ ಎಲ್ಲಾ ರಾಜ್ಯಗಳ ವಿಧಾನಸಭೆಗಳು ಏಕಕಾಲದಲ್ಲಿ ನಡೆದಿದ್ದು ನಾವು ಗಮನಿಸಬಹುದು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ಒಟ್ಟಿಗೆ ನಡೆಸುವ ಪ್ರಸ್ತಾವನೆ ಈಗಿನ ಉಲ್ಲೇಖನವಲ್ಲ .

ಅಂದು 1983 ರಲ್ಲಿ ಚುನಾವಣಾ ಆಯೋಗವು ತನ್ನ ವಾರ್ಷಿಕ ವರದಿಯಲ್ಲಿ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ವ್ಯವಸ್ಥೆಯನ್ನು ರೂಪಿಸಬೇಕೆಂದು ಶಿಫಾರಸ್ಸು ಮಾಡಿತು.

ನಂತರ ಕಾನೂನು ಆಯೋಗವು 1999 ರಲ್ಲಿ 120ನೇ ವರದಿಯ ಪ್ರಕಾರ ಲೋಕಸಭೆ ಮತ್ತು ಎಲ್ಲಾ ವಿಧಾನಸಭೆ ಚುನಾವಣೆಗಳು ಏಕಕಾಲದಲ್ಲಿ ನಡೆಸಿ ಹಿಂದಿನ ಕಾಲಕ್ಕೆ ಹಿಂತುರುಗಬೇಕು ಎಂದು ಹೇಳಿತು.

ಇತ್ತೀಚಿಗೆ 2015ರಲ್ಲಿ ಸಂಸದೀಯ ಸ್ಥಾಯಿ ಸಮಿತಿಯು 79ನೇ ವರದಿಯ ಪ್ರಕಾರ ಎನ್ ಐ ಟಿ ಐ ಆಯೋಗವು ಮಾಜಿ ಅಧ್ಯಕ್ಷರ ನೇತೃತ್ವದಲ್ಲಿ ಕಾನೂನು ಸಚಿವಾಲಯದ 8 ಸದಸ್ಯರ ಒಂದು ಕಮಿಟಿ ರಚಿಸಿತ್ತು .

ಭಾರತದಲ್ಲಿ ಏಕಕಾಲಕ್ಕೆ ಚುನಾವಣಾ ನಡೆಸಲು ಕೊಡುವ ಕಾರಣ ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳು ಆವರ್ತನ ಮತ್ತು ಅದಕ್ಕೆ ಸಂಬಂಧಿಸಿದ ವೆಚ್ಚ ಕಡಿಮೆ ಮಾಡುವುದು ಎಂದು ಹೇಳುತ್ತವೆ.

ಕೆಲವು ಉದಾಹರಣೆಗಳು ನೋಡುವುದಾದರೆ 2017ರಲ್ಲಿ 1015 ಲಕ್ಷ ಕೋಟಿ ರೂಪಾಯಿಗಳು ವೆಚ್ಚ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಅದೇ ತರ 2019 ರ ಚುನಾವಣೆಯು ಅತ್ಯಂತ ದುಬಾರಿ ಚುನಾವಣೆ ಎಂದು ಗುರುತಿಸಲಾಗಿದೆ ಈ ಚುನಾವಣೆಯಲ್ಲಿ 55000 ಕೋಟಿ ರೂಪಾಯಿಗಳು 50 ಲಕ್ಷ ಸಿಬ್ಬಂದಿ ವರ್ಗದವರು 20 ಲಕ್ಷ ಇವಿಎಂ ಮಷೀನ್ ಬಳಕೆ ಮಾಡಲಾಗಿದೆ. ಆದರೆ ಇದನ್ನೇ ಏಕಕಾಲದಲ್ಲಿ ನಾವು ಚುನಾವಣೆ ನಡೆಸಿದರೆ ನಾಲ್ಕು ಲಕ್ಷ ಕೋಟಿ ಉಳಿಸಬಹುದು ಎಂಬುವುದು ಒಂದು ಅಂದಾಜು ಅದರಂತೆ ಹಣ ಉಳಿತಾಯವಾಗುತ್ತದೆ, ಮಾನವನ ಸಂಪನ್ಮೂಲವು ಕಡಿಮೆಯಾಗುತ್ತದೆ ಎಂಬುವುದು ಮೊದಲನೆಯ ವಾದ ಅದೇ ತರ ಎರಡನೇ ವಾದವೇನೆಂದರೆ ಪದೇ ಪದೇ ಚುನಾವಣೆ ನಡೆಸಿದರೆ ಸರ್ಕಾರಿ ಕೆಲಸಗಳಿಗೆ ಅಡಚಣೆ ಮತ್ತು ನೀತಿ ಸಂಹಿತೆ ಜಾರಿಯಾಗುವುದರಿಂದ ಸರ್ಕಾರದ ವೇಗ ಕಳೆದುಕೊಳ್ಳುತ್ತದೆ ಎಂದು.

ನಾಲ್ಕು ಲಕ್ಷ ಕೋಟಿ ಉಳಿಸಲು ಸಂವಿದಾನಕ್ಕೆ ಮತ್ತು ಚುನಾವಣೆ ವ್ಯವಸ್ಥೆಗೆ ಬಾರಿ ಬದಲಾವಣೆ ಮಾಡಬೇಕಾಗುತ್ತದೆ. ಆದರೆ ಒಂದು ಆಶ್ಚರ್ಯಕರ ಸಂಗತಿ ಏನೆಂದರೆ ಸರ್ಕಾರವು ಪ್ರತಿ ವರ್ಷ ಕಾರ್ಪೊರೇಟ್ ಕಂಪನಿಗಳಿಗೆ ಎರಡು ಲಕ್ಷ ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತದೆ ಅದರ ಉದ್ದೇಶ ಸ್ಥಳೀಯರಿಗೆ ಉದ್ಯೋಗ ನೀಡುವುದಾಗಿದೆ ಆದರೆ ಯಾವ ಕಂಪನಿಯೂ ನಿರುದ್ಯೋಗ ನಿವಾ–ರಿಸಲು ಪ್ರಯತ್ನಿಸಿಲ್ಲ ಎಂಬುದು ಕಟು ವಾಸ್ತವ್ಯ.



ಒಂದು ದೇಶ ಒಂದು ಚುನಾವಣೆ ಬರುವದರಿಂದ ಫೆಡರಲ್ ಸಿಸ್ಟಮ್ ಗೆ ಭಾರಿ ಬದಲಾವಣೆಗೆ ಒಳಪಡುತ್ತದೆ ಏಕಕಾಲಕ್ಕೆ ದೇಶದ ಎಲ್ಲಾ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆದರೆ ಸಂಯುಕ್ತ ಒಕ್ಕೂಟ ವ್ಯವಸ್ಥೆಯು ನಿಯುಮವನ್ನು ಗಾಳಿಗೆ ತೋರಿದಂತಾಗುತ್ತದೆ ಏಕೆಂದರೆ ಲೋಕಸಭೆ ಚುನಾವಣೆ ವಿಚಾರವು ರಾಷ್ಟ್ರೀಯತೆ ಮತ್ತು ಅಂತರಾಷ್ಟ್ರೀಯ ವಿಚಾರಗಳು ಜನರ ಮುಂದೆ ಇರುವುದು, ಅದೇ ವಿಧಾನಸಭೆ ಚುನಾವಣೆಯಲ್ಲಿ ಪ್ರಾದೇಶಿಕತೆ ಸಮಸ್ಯೆಗಳು, ಶಿಕ್ಷಣ ಮೂಲಭೂತ ಸೌಲಭ್ಯ ಮುಂತಾದ ವಿಷಯಗಳು ಮುನ್ನಲೆಯಲ್ಲಿ ಬರುತ್ತವೆ ಮುನಿಸಿಪಾಲಿಟಿ ಚುನಾವಣೆಯಲ್ಲಿ ನಗರದ ಸ್ವಚ್ಛತೆ ಸ್ಥಳೀಯ ಸಮಸ್ಯೆಗಳ ಮೇಲೆ ಚುನಾವಣೆ ನಡೆಯುತ್ತದೆ. ಏಕಕಾಲದಲ್ಲಿ ಚುನಾವಣೆ ನಡೆದರೆ ಜನರು ಗೊಂದಲದಲ್ಲಿ ಶಿಲುಕಿಸಿದಂತಾಗುತ್ತದೆ ಜನರು ಅತ್ತ ದರಿತ್ತಪುಲಿ ಇತ್ತ ಪುಲಿ ಹಾಗೆ ಸಾಮಾನ್ಯ ಜನರ ದಿಕ್ಕು ತಪ್ಪಿಸಿದಂತಾಗುತ್ತದೆ

ಭಾರತದ ಸಂಯುಕ್ತ ಒಕ್ಕೂಟದಲ್ಲಿ ಅವುಗಳ ಅಧಿಕಾರದ ಮೊಟಕುಗೊಳಿಸಿ ಕೇಂದ್ರ ಸರ್ಕಾರದ ಅಧೀನದಲ್ಲಿ ಎಲ್ಲಾ ಆಡಳಿತ ವ್ಯವಸ್ಥೆ ಕೇಂದ್ರೀಕರಣ ಗೊಳ್ಳುತ್ತದೆ ಯಾವುದಾದರೂ ರಾಜ್ಯದಲ್ಲಿ ಬಹುಮತ ಕುಸಿತವಾದರೆ ಅಲ್ಲಿ ಚುನಾವಣೆ ನಡೆಸದೆ ರಾಷ್ಟ್ರಪತಿ ಆಡಳಿತವು ಒಳಪಡುವುದು ಇದು ಏನನ್ನು ತೋರಿಸುತ್ತದೆ ಎಂದರೆ, ಬ್ರಿಟಿಷ್ ಸರ್ಕಾರದಲ್ಲಿದ್ದ ಸಹಾಯಕ ಸೈನಿಕ ಪದ್ಧತಿಯನ್ನು ಹೋಲುತ್ತದೆ ಎಂದರೆ ತಪ್ಪಾಗದು, ಪ್ರಾದೇಶಿಕ ಪಕ್ಷಗಳು ತಮ್ಮ ಅಸ್ತಿತ್ವವನ್ನು ಕ್ರಮೇಣ ಕಳೆದುಕೊಳ್ಳುತ್ತವೆ ಎಂದು ಹಲವಾರು ವರದಿಗಳು ಈಗಾಗಲೇ ಹೇಳಿವೆ.

ಭಾರತದ ಸಂವಿಧಾನದಲ್ಲಿ ಚುನಾವಣಾ ಆಯೋಗಕ್ಕೆ ತನ್ನದೇ ಆದ ಪ್ರಾಮುಖ್ಯತೆ ಇದೆ ಚುನಾವಣಾ ಆಯೋಗ ಎರಡು ಪ್ರಕಾರ ಹೊಂದಿದೆ ಒಂದು ಭಾರತೀಯ ಚುನಾವಣಾ ಆಯೋಗವು ಇದು ಲೋಕಸಭೆ ಮತ್ತು ರಾಜ್ಯಸಭೆಗಳಿಗೆ ಮತ್ತು ರಾಜ್ಯಗಳ ವಿಧಾನಸಭೆ ಚುನಾವಣೆಯನ್ನು ಚುನಾವಣಾ ಆಯೋಗ ನಡೆಸುತ್ತದೆ ಎರಡನೆಯದು ರಾಜ್ಯ ಚುನಾವಣೆ ಆಯೋಗ ಇದು ಸ್ಥಳೀಯ ಸಂಸ್ಥೆಗಳ ಚುನಾವಣೆ ಜವಾಬ್ದಾ–ರಿಯನ್ನು ನಿಭಾಯಿಸುತ್ತದೆ.

ಏಕರೂಪ ಚುನಾವಣೆ ವ್ಯವಸ್ಥೆಯಿಂದ ರಾಷ್ಟ್ರೀಯ ಪಕ್ಷಗಳಿಗೆ ಲಾಭವಿದೆ ಎಂಬುವುದರಲ್ಲಿ ಎರಡು ಮಾತಿಲ್ಲ ಆದರೆ ಪ್ರಾದೇಶಿಕ ಪಕ್ಷಗಳು ತಮ್ಮ ಅಸ್ತಿತ್ವಕ್ಕೆ ನೆಲೆ ಸಿಗದು

ಅದರಂತೆ ನಾವು ಅಂತರಾಷ್ಟ್ರೀಯ ದೃಷ್ಟಿಕೋನದಲ್ಲಿ ನೋಡುವುದಾದರೆ ದಕ್ಷಿಣ ಆಫ್ರಿಕಾದಲ್ಲಿ ಚುನಾವಣೆಯು ರಾಷ್ಟ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳಿಗೆ ಐದು ವರ್ಷಗಳ ಕಾಲಕ್ಕೆ ಏಕಕಾಲದಲ್ಲಿ ಚುನಾವಣೆ ನಡೆಸಲಾಗುತ್ತದೆ ಮತ್ತು ಎರಡು ವರ್ಷಗಳ ನಂತರ ಪುರುಸಭೆ ಚುನಾವಣೆಗಳು ನಡೆಯುತ್ತವೆ.

ಇನ್ನು ಸ್ವೀಡನ್ ದೇಶದಲ್ಲಿ ರಾಷ್ಟ್ರೀಯ ಶಾಸಕಾಂಗ ಮತ್ತು ಸ್ಥಳೀಯ ಸಂಸ್ಥೆಗಳಿಗೆ / ಮುನ್ಸಿಪಾಲಿಟಿ ಅಸೆಂಬ್ಲಿಗಳಿಗೆ ನಿಗದಿತ ದಿನಾಕಂದು ಚುನಾವಣೆ ನಡೆಸುತ್ತಾರೆ ಆದರೆ, ಈ ದೇಶಗಳು ಗಟ್ಟಿ ಪ್ರಜಾಪ್ರಭುತ್ವದ ಬೇರುಗಳಲ್ಲ ಎಂಬುದನ್ನು ಅರಿಯಬೇಕು.




ಒಂದು ದೇಶ ಒಂದು ಚುನಾವಣೆ ಜಾರಿಗೆ ತಂದರೆ ಇದು ನಮ್ಮ ಸಂವಿಧಾನ ರಚನೆಗೆ ಮತ್ತು ಮೂಲಭೂತ ತತ್ವಗಳು ದುರ್ಬಲಗೊಳ್ಳುತ್ತವೆ ಹಾಗೂ ಎಲ್ಲಾ ರಾಜ್ಯಗಳು ಮತ್ತು ಕೇಂದ್ರ ಆಡಳಿತ ಪ್ರದೇಶಗಳು,ವೇಳಾಪಟ್ಟಿಗಳು ಸಂಪನ್ಮೂಲಗಳು, ಇತ್ಯಾದಿ ಸಂಯೋಜಿಸುವುದು ಸೇರಿದಂತೆ ಬೃಹತ್ ಲಾಜಿಸ್ಟಿಕಲ್ ಸವಾಲುಗಳು ಎದುರಾಗುತ್ತವೆ.

ಚುನಾವಣೆ ಸಿಂಕ್ರೋನೈಸ್ ಮಾಡುವುದರಿಂದ ಆ ಪ್ರದೇಶದ ಪ್ರಾದೇಶಿಕ ಪರಿಸರದ ಮೇಲೆ ವ್ಯತ್ಯಾಸವಾಗುತ್ತದೆ ಅದರ ವ್ಯವಸ್ಥೆಯು ಸಮರ್ಪಕವಾಗಿ ಪರಿಗಣನೆಗೆ ಬರುವುದಿಲ್ಲ. ಚುನಾವಣೆ ನಡೆಸುವುದು ದುಬಾ–ರಿಯಾಗುತ್ತದೆ ಮತ್ತು ಮಾನವ ಸಂಪನ್ಮೂಲಗಳ ಕೊರತೆ ಉಂಟಾಗಿ ಗಲಭೆಗಳು, ಅಕ್ರಮ ಚಟುವಟಿ–ಕೆಗಳು ಉಂಟಾಗಬಹುದು ಎಂದು ಈಗಾಗಲೇ ಕೇಂದ್ರ ಸರಕಾರಕ್ಕೆ ವರದಿಗಳು ಕೊಡಲ್ಪಟ್ಟಿವೆ.

“ಅಧಿಕಾರದ ಮೇಲೆ ಸಂವಿಧಾನಾತ್ಮಕ ನಿರ್ಧಾರಗಳಿದ್ದರೂ ಕೂಡ ಆ ಅಧಿಕಾರಸ್ತ ಅತ್ಯಂತ ಬಲಿಷ್ಠವಾದ ಕಾರ್ಯಾಂಗದ ಅಧಿಪತಿಯಾಗಿ ಬದಲಾಗುತ್ತಾನೆ” ಎಂದು ಲಾರ್ಡ್ ಬ್ರೈಸ್ ಹೇಳಿಕೆಯನ್ನು ನಾವು ಇಲ್ಲಿ ನೋಡಬಹುದು.

ಕೆಲವು ವರ್ಷಗಳ ಅಧಿಕಾರಕ್ಕಾಗಿ ಮುಂದಿನ ಪೀಳಿಗೆಗೆ ಸಂಘರ್ಷದ ರಾಷ್ಟ್ರ ನಿರ್ಮಾಣವಾಗುವುದು ಸೂಕ್ತವಲ್ಲ, ಒಟ್ಟಾರೆಯಾಗಿ ಹೇಳುವುದಾದರೆ ಭಾರತದಲ್ಲಿ ಏಕಕಾಲದಲ್ಲಿ ಚುನಾವಣೆ ವೆಚ್ಚ, ಉಳಿತಾಯ, ಸಮಯ ಮತ್ತು ಕಡಿಮೆ ರಾಜಕೀಯ ಅಡ್ಡಿಪಡಿಸುವ ಸಾಮರ್ಥ್ಯವನ್ನು ನೀಡುತ್ತದೆ ಎಂದು ಹೇಳಬಹುದು. ಆದರೆ, ಅವುಗಳು ಗಮನಾರ್ಹವಾದ ವ್ಯವಸ್ಥಾಪನ, ಸಂವಿಧಾನಿಕ ಮತ್ತು ಆಡಳಿತದ ಸವಾಲುಗಳೊಂದಿಗೆ ಬರುತ್ತದೆ. ಅಲ್ಲದೆ ಆಡಳಿತದ ದುರುಪಯೋಗವಾಗಿ ಸರ್ವಾದಿಕಾರತ್ವಕ್ಕೆ ಮುನ್ನುಡಿಯನ್ನು ಬರೆಯಬಹುದು. ಆದ್ದರಿಂದ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದಲ್ಲಿ ಈ ಪರಿಕಲ್ಪನೆಯೂ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು ಸುಲಭ ಸಾಧ್ಯವಾಗದು ಎಂದು ಹೇಳಬಹುದು.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR